ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 24 ಜೂನ್ 14, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಸಿ. ಪಿ. ಐ. [ಎಂ] ಮತ್ತು ಸಿ. ಪಿ. ಐ. ಸಮಾವೇಶದ ಕರೆ

ಜೂನ್ 26 ವಿಧಾನ ಸೌಧ ಪಿಕೇಟಿಂಗ್ ಯಶಸ್ವಿಗೊಳಿಸಿ

ಜನತಾ ಸರ್ಕಾರ ವಿದ್ಯುತ್‌ಚ್ಛಕ್ತಿ, ಹಾಲು ಮತ್ತು ಹೋಟೆಲ್ ತಿಂಡಿಗಳ ಬೆಲೆಗಳನ್ನು ಏರಿಸಿದ್ದನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿ ಮೇ 9ರಂದು ಭಾರತ ಕಮ್ಯುನಿಸ್ಟ್‌ಪಕ್ಷ (ಮಾರ್ಕ್ಸ್‌ವಾದಿ) ಮತ್ತು ಭಾರತ ಕಮ್ಯುನಿಸ್ಟ್ ಪಕ್ಷ, ರೈತ-ಕಾರ್ಮಿಕ-ವಿದ್ಯಾರ್ಥಿ-ಯುವಜನ ಸಂಘಟನೆ ಮತ್ತಿತರ ಸಂಘಗಳ ಕಾರ್ಯಕರ್ತರ ಸಮಾವೇಶ ಬೆಂಗಳೂರಿನ ಪುರಭವನದಲ್ಲಿ ಯಶಸ್ವಿಯಾಗಿ ಜರುಗಿತು. ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಕಾ|| ಸೂರ್ಯನಾರಾಯಣರಾವ್‌ರವರು ಕಾಂಗ್ರೆ-ಜನತಾ ಪಕ್ಷಗಳೆರಡು ಕಳೆದ 40ವರ್ಷಗಳಿಂದ ಜನತೆಯ ಸಂಕಷ್ಟಗಳಿಗೆ ಪರಿಹಾರ ಸೂಚಿಸುವುದರಲ್ಲಿ ವಿಫಲವಾಗಿದ್ದು ಕೇರಳ-ಪ ಬಂಗಾಳದ ಜನತೆ ನೀಡಿರುವ ತೀರ್ಪಿನಂತೆ ಕರ್ನಾಟಕದಲ್ಲಿಯೂ ದುಡಿಯುವ ಜನರ ಪರವಾದ ಪರ್ಯಾಯ ಶಕ್ತಿ ಬೆಳೆಸಿ ಎಲ್ಲಾ ವಿಭಾಗದ ಜನತೆ ಆಂದೋಳನಗಳ ಮುಖಾಂತರ ದುಡಿಯುವ ಜನತೆಯ ಹಿತ ಕಾಪಾಡುವ ಜವಾಬ್ದಾರಿ ಸರ್ಕಾರ ತರಲು ಆತ್ಮವಿಶ್ವಾಸದಿಂದ ದುಡಿಯಬೇಕೆಂದು ಕರೆ ನೀಡಿದರು. ಹರಿಯುವ ನೀರನ್ನು ತಡೆಹಿಡಿದು ವಿದ್ಯುತ್‌ತಯಾರಿಸುವ ಟ್ರಾನ್ಸ್‌ಮಿಷನ್‌ವೆಚ್ಚಕಡಿಮೆ ಮಾಡುವ, ಉತ್ಪಾದನೆ ತೀವ್ರಗೊಳಿಸಿ ಪಕ್ಕದ ರಾಜ್ಯದಿಂದ ಆಮದು ಕಡಿತಗೊಳಿಸುವ ಯೋಜನಾಬದ್ಧವಾಗಿ ಕಾರ್ಯವೆಸಗದೆ ಅದಕ್ಷತೆ-ಭ್ರಷ್ಟಾಚಾರದಲ್ಲಿ ಮುಳುಗಿ ಸಣ್ಣಪುಟ್ಟ ಕಾರ್ಮಿಕರ ಮೇಲೆ, ಶ್ರೀಸಾಮಾನ್ಯರ ಮೇಲೆ ಸರ್ಕಾರ ತನ್ನ ಹೊರೆಯನ್ನು ಹಾಕುತ್ತಿದೆ ಎಂದು ಆರೋಪಿಸಿದರು. ಸಿ.ಪಿ.ಐ.ನ ಕಾರ್ಯದರ್ಶಿ ಕಾ|| ಎಂ.ಎಸ್.ಕೃಷ್ಣನ್‌ಮಾತನಾಡಿ ವಿದ್ಯುತ್ ಉತ್ಪಾದನೆಯಲ್ಲಿ ಪ್ರತಿ ವರ್ಷ ಕಡಿತ-ಆಮದು ವಿದ್ಯುತ್ ಹೆಚ್ಚಾಗಿರುವುದು ಯೋಜನಾ ವೆಚ್ಚದಲ್ಲಿ ಕಡಿತ ಜನರೇಟರ್ ದುರಸ್ಥಿಯಲ್ಲಿ ಕಳ್ಳತನ ಮುಂತಾದ ಹಲವಾರು ಲೋಪ ದೋಷಗಳ ಬಗ್ಗೆ ಅಂಕಿ ಅಂಶ ನೀಡಿದರು. ಎ.ಇ.ಎಚ್. ಬಳಕೆದಾರರಿಗೆ ಯಾವ ತೊಂದರೆಯಾಗಿಲ್ಲವೆಂಬ ಅಧಿಕಾರಿಗಳ ಹೇಳಿಕೆಯನ್ನು ಅವರು ಖಂಡಿಸಿದರು.

ಸಿ.ಐ.ಟಿ.ಯು. ಜಿಲ್ಲಾ ಮುಖಂಡರಾದ ಕಾ|| ಕೆ.ಎಸ್. ಸುಬ್ರಮಣಿ ರೈತ ಸಂಘದ ನಾಯಕರಾದ ಕಾ|| ಪಿ. ಜಗನ್ನಾಥ್ ವಿದ್ಯಾರ್ಥಿ ಯುವ ಜನ ಮುಖಂಡರುಗಳಾದ ಕಾ|| ಎನ್. ರಾಜಣ್ಣ ಹಾಗೂ ಟಿ. ಶಿವಶಂಕರ್‌ರವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಎ.ಐ.ಟಿ.ಯು.ಸಿ.ನ ಎಂ.ಡಿ.ಹರಿಗೋವಿಂದ್, ಯುವಜನ ಫೆಡರೇಷನ್ ತೋಟ ವೀರರಾಜು,ವಿದ್ಯಾರ್ಥಿ ಫೆಡರೇಷನ್‌ನ ನಿರಂಜನ ಆರಾಧ್ಯರವರುಗಳು ಮಾತನಾಡಿದರು. ಸಮಾವೇಶದ ಪ್ರಾರಂಭದಲ್ಲಿ ಸಿ.ಪಿ.ಐ.ನ ಜಿಲ್ಲಾ ಕಾರ್ಯದರ್ಶಿ ಎಂ.ಸಿ.ವೆಂಕಟರಾವ್ ಸ್ವಾಗತಿಸಿದರು. ಸಿ.ಐ.ಟಿ.ಯು ಜಿಲ್ಲಾ ನಾಯಕರಾದ ಕಾ||ಆರ್. ಶ್ರೀನಿವಾಸ್ ಎಸ್.ಆರ್.ಆರಾಧ್ಯ ಹಾಗೂ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾ. ಮುಗುವಾಳಪ್ಪ ಶ್ರೀ ರಾಮಪಾಲ್, ಸೈಮನ್ ರಾಜನ್, ಜಿ.ಎನ್.ವೆಂಕಟೇಶ್ ರನ್ನು ಒಳಗೊಂಡ ಆರು ಜನರ ಅಧ್ಯಕ್ಷೀಯ ಮಂಡಳಿ ಸಭೆಯ ಕಾರ್ಯಕಲಾಪಗಳನ್ನು ನಿರ್ವಹಿಸಿದರು. ಜನತಾ ಸರ್ಕಾರವು ವಿದ್ಯುತ್, ಹಾಲಿನ ದರ ಏರಿಕೆಯನ್ನು ಪುನರ್ ಪರಿಶೀಲಿಸಿ ಇಳಿಸಾದಿದ್ದಲ್ಲಿ ಹಾಗೂ ಹೋಟೆಲ್ ದರಗಳನ್ನು ನ್ಯಾಯಯುತವಾಗಿ ನಿಗದಿ ಪಡಿಸುವುದರೊಂದಿಗೆ ನಗರದಲ್ಲಿ **ಪಡಿತರ** ಪ್ರಮಾಣದಲ್ಲಿ ಕಡಿತವನ್ನು ರದ್ದುಗೊಳಿಸದಿದ್ದಲ್ಲಿ ಜೂನ್ 26 ರಂದು **ಸಾರ್ವತ್ರಿಕ** ಮುಷ್ಕರ ಹಾಗೂ **ಬಂದ್** ಇತ್ಯಾದಿ ತೀವ್ರ ಸ್ವರೂಪದ **ಚಳುವಳಿ** ಹಮ್ಮಿಕೊಂಡು ವಿಧಾನಸೌಧ **ಮತ್ತು** ಸರ್ಕಾರಿ ಕಛೇರಿಗಳ ಪಿಕೇಟಿಂಗ್ ನಡೆಸಲು ಸಮಾವೇಶವು ಸರ್ವಾನುಮತದಿಂದ ತೀರ್ಮಾನಿಸಿತು. ಜೂನ್ 26ರ ಬಂದ್ ಮತ್ತು ಪಿಕೆಟಿಂಗ್ ಚಳುವಳಿಗೆ ನಗರದ ಕಾರ್ಮಿಕವರ್ಗ ಸಣ್ಣ ಕೈಗಾರಿಕೋದ್ಯಮಿಗಳು ವ್ಯಾಪಾರೋದ್ಯಮಿಗಳು ಸಮಸ್ತನಾಗರೀಕರು ಗ್ರಾಮೀಣ ಜನತೆ ಸಕ್ರೀಯವಾದ ಬೆಂಬಲ ನೀಡಿ ಸಹಕರಿಸಬೇಕೆಂದು ಕರೆ ನೀಡಿತು.

(8ನೇ ಪುಟ ನೋಡಿ)

ಭಾರತ – ಶ್ರೀಲಂಕಾ ವಿರಸ ಪಾಲಿಟ್‌ಬ್ಯೂರೋ ಆತಂಕ

ಜಾಫ್ನಾಕ್ಕೆ ಪರಿಹಾರ ಸಾಮಗ್ರಿ ಇಳಿಸುವ ಭಾರತದ ಅಭೂತಪೂರ್ವ ಕ್ರಮದ ನಂತರ ಭಾರತ ಮತ್ತು ಶ್ರೀಲಂಕಾದ ಸಂಬಂಧಗಳಲ್ಲಿ ಹೆಚ್ಚುತ್ತಿರುವ ಬಿಗುವಿನ ಬಗ್ಗೆ ಸಿ.ಪಿ.ಐ. (ಎಂ)ನ ಪಾಲಿಟ್ ಬ್ಯೂರೋ ತೀವ್ರ ಆಂತಕ ವ್ಯಕ್ತಪಡಿಸಿದೆ.

ಜಾಫ್ನಾದ ತಮಿಳು ಅಲ್ಪಸಂಖ್ಯಾತರ ವಿರುದ್ಧ ಸಾಮೂಹಿಕ ನರಹತ್ಯಾಕಾರಿ ಆಕ್ರಮಣಗಳು ಹಾಗೂ ಐದು ತಿಂಗಳ ಆರ್ಥಿಕ ದಿಗ್ಬಂಧನದಿಂದಾಗಿ ಆಹಾರ ಸಾಮಗ್ರಿಗಳ ಮತ್ತು ಔಷಧಿಗಳ ತೀವ್ರ ಅಭಾವ ಉಂಟಾಗಿದ್ದು ಜನತೆಯನ್ನು ಹಸಿವಿನ ಮತ್ತು ವಿನಾಶದ

ಶ್ರೀಲಂಕಾದ ಸಮಗ್ರತೆ, ಸಾರ್ವಭೌಮತ್ವವನ್ನು ಗೌರವಿಸಿ, ಅದರಲ್ಲಿ ತಮಿಳರ ಮೇಲಿನ ಕಗ್ಗೊಲೆ ನಿಲ್ಲಿಸಬೇಕೆಂದು ವಿಶ್ವಜನಾಭಿಪ್ರಾಯಕ್ಕೆ ಪಿ.ಬಿ. ಕರೆ ನೀಡಿದೆ.

ಶ್ರೀಲಂಕಾ ಸಮಸ್ಯೆಗಳಿಗೆ ಮಧ್ಯಪುಟದ ಲೇಖನಗಳನ್ನು ನೋಡಿ.

ಅಂಚಿಗೆ ತಳ್ಳಲಾಗಿದೆ. ಇವರಿಗೆ ಪರಿಹಾರ ಸಾಮಗ್ರಿಗಳ ತುರ್ತು ಪೂರೈಕೆ ಮಾನವೀಯ ಪರಿಗಣನೆಯಿಂದ ಅಗತ್ಯವಾದ ಒಂದು ಕ್ರಮ. ಜಯವರ್ಧನೆ ಸರಕಾರ ಈ ಪ್ರಶ್ನೆಯನ್ನು ಇತ್ಯರ್ಥಮಾಡಿ ಎರಡು ದೇಶಗಳ ಸಂಬಂಧಗಳಲ್ಲಿನ ಈ ಮುಳ್ಳನ್ನು ನಿವಾರಿಸಬೇಕೆಂದು ಪಾಲಿಟ್ ಬ್ಯೂರೋ ಹೇಳಿದೆ; ಭಾರತ ಸರ್ಕಾರ ಪರಿಹಾರ ಸಾಮಗ್ರಿಗಳ ಪೂರೈಕೆ ವಿಧಾನಗಳ ಬಗ್ಗೆ ಶ್ರೀಲಂಕಾ ಸರ್ಕಾರದೊಡನೆ ಮಾತುಕತೆ ನಡೆಸಬೇಕೆಂದು ಕರೆ ನೀಡಿದೆ; ಶ್ರೀಲಂಕಾ ಪರಿಹಾರ ಪೂರೈಕೆಗೆ ಅವಕಾಶ ಮಾಡಿಕೊಡುವಂತೆ ಜಾಗತಿಕ ಅಭಿಪ್ರಾಯ ಒತ್ತಾಯಿಸಬೇಕೆಂದು ಪಾಲಿಟ್‌ಬ್ಯೂರೋ ಮನವಿ ಮಾಡಿಕೊಂಡಿದೆ.

ದೇಶದ ಇತರ ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳ ಜೊತೆಗೆ ಸಿ.ಪಿ.ಐ. (ಎಂ) ಶ್ರೀಲಂಕಾದ ಜನಾಂಗ ಸಮಸ್ಯೆಗೆ ಆ ದೇಶದ ಐಕ್ಯತೆ, ಸಮಗ್ರತೆ ಮತ್ತು ಸಾರ್ವಭೌಮತೆಯ ಚೌಕಟ್ಟಿನೊಳಗೆ ಪರಿ

(8 ನೇ ಪುಟ ನೋಡಿ)

ಪ. ಬಂಗಾಳ, ಕೇರಳದ ಜನಪರ ಬಜೆಟ್‌ಗಳು

ಕೇಂದ್ರದ ಕೈಯಲ್ಲಿಯೇ ಎಲ್ಲ ಆರ್ಥಿಕ ಅಧಿಕಾರ ಹಾಗೂ ಸಂಪನ್ಮೂಲಗಳು ಕೇಂದ್ರೀಕೃತವಾಗಿ ರಾಜ್ಯ ಸರ್ಕಾರಗಳು ತಮ್ಮ ಸ್ವಪ್ರಯತ್ನದಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಅವಕಾಶಗಳು ಅತೀ ಸೀಮಿತವಾಗಿದ್ದರೂ ಬಂಡವಾಳಶಾಹಿ ನೀತಿಗಳಿಗೆ ಪರ್ಯಾಯವಾದ ಆರ್ಥಿಕ ನೀತಿಯೊಂದಿದೆ. ಈ ಆರ್ಥಿಕ ನೀತಿಯ ಮೂಲಕ ಜನರ ಪರವಾಗಿ ಕೆಲಸ ಮಾಡಿ ಜನರನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಸಾಧ್ಯ ಎಂಬುದನ್ನು ಎಡ ಸರ್ಕಾರಗಳು ತಾವು ಮಂಡಿಸಿದ ಬಜೆಟ್‌ಗಳ ಮೂಲಕ ಪ್ರತಿಬಿಂಬಿಸಿವೆ.

ದೇಶದಲ್ಲಿರುವ 13ಕಾಂಗ್ರೆಸ್ಸೇತರ ರಾಜ್ಯಗಳ ಪೈಕಿ ಮಾತ್ರ ಎಡಪಕ್ಷಗಳ ಸರ್ಕಾರಗಳು ಕಾಂಗ್ರೆಸ್ಸಿನ ಬಂಡವಾಳಶಾಹಿ ಪರ ಬಜೆಟ್‌ಗಳಿಗಿಂತ ಭಿನ್ನವಾದ ದೃಷ್ಟಿಕೋನ ಹೊಂದಿವೆ. ಈ ರಾಜ್ಯಗಳು ನಿಜವಾದ ಜನಪರ ಬಜೆಟ್ ಮಂಡಿಸಿವೆ.

ದೇಶದಲ್ಲಿರುವ 13ಕಾಂಗ್ರೆಸ್ ರಾಜ್ಯಗಳ ಮಾತಿರಲಿ 11ಕಾಂಗ್ರೆಸ್ಸೇತರ ಪಕ್ಷಗಳ ರಾಜ್ಯ ಸರ್ಕಾರಗಳಲ್ಲಿಯೇ ಒಡೆದು ಕಾಣ-ವಂತಹ ಬಜೆಟ್‌ಗಳನ್ನು ದೇಶದ ಮುಂದಿರಿಸಿವೆ, ಈ ರಾಜ್ಯ ಸರ್ಕಾರಗಳು ಆದುದರಿಂದ ಈ ಬಜೆಟ್‌ಗಳ ಉಪಯೋಗ ಕೇವಲ ಪ.ಬಂಗಾಲ ಹಾಗೂ ಕೇರಳಗಳ ಜನತೆಗೆ ಮಾತ್ರಸೀಮಿತವಾಗಿದ್ದರೂ ಅವು ದೇಶ ಜನ ಮನವೆಂಬ ಸಾಗರದಲ್ಲಿ ದೊಡ್ಡ ಅಲೆಗಳನ್ನೇ ಎಬ್ಬಿಸುತ್ತಿವೆ. ಬಂಡವಾಳಶಾಹಿ ಪತ್ರಿಕೆಗಳು ಕೂಡ ಈ ಬಜೆಟ್‌ಗಳಿಗೆ ಅನಿವಾರ್ಯವಾಗಿ ಪ್ರಚಾರವಿಯಲೇಬೇಕಾಗಿ ಬರುತ್ತಿದೆ.

ಪಶ್ಚಿಮ ಬಂಗಾಳದ ವಿಧಾನ ಸಭೆಯಲ್ಲಿ ಮಂಡಿಸಲ್ಪಟ್ಟ 1987-88ನೇ ಸಾಲಿನ ಎಡರಂಗ ಸರ್ಕಾರದ ಬಜೆಟ್ 92.25ಕೋಟಿ ರೂ.ಗಳಷ್ಟು ಹೆಚ್ಚು ಸಂಪನ್ಮೂಲವನ್ನು ಜನಪರ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಿದೆ. ಹಣಕಾಸು ಮಂತ್ರಿ ಅಶೀಮ್‌ದಾಸ್‌ಗುಪ್ತ ಮಂಡಿಸಿದ ಈ ಬಜೆಟ್ ಕೆಲವು ಭಿನ್ನ ಅಂಶಗಳನ್ನೊಳಗೊಂಡಿದೆ.

* ವಸೂಲಿಯಾದ ಕರದ 50% ಭಾಗ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಅಭಿವೃದ್ಧಿ ಮತ್ತು ಇತರ ಚಟುವಟಿಕೆಗಳಿಗಾಗಿ ಕೊಟ್ಟು ಬಜೆಟ್‌ನ ದೊಡ್ಡಭಾಗದ ಅನುಷ್ಠಾನದ ಜವಾಬ್ದಾರಿಯನ್ನು ಈ ಪಂಚಾಯತುಗಳು

ಪ. ಬಂಗಾಳ, ಕೇರಳಗಳಲ್ಲಿ ಹೊಸತಾಗಿ ಚುನಾಯಿತವಾದ ಎಡರಂಗ ಹಾಗೂ ಎಡ ಪ್ರಜಾಪ್ರಭುತ್ವ ರಂಗದ ಸರ್ಕಾರಗಳು ತಮ್ಮ ವಾರ್ಷಿಕ ಬಜೆಟ್‌ಗಳನ್ನು ಮಂಡಿಸಿವೆ. ಈ ಬಜೆಟ್‌ಗಳು ಉಳಿದ ರಾಜ್ಯಗಳ ಬಜೆಟ್‌ಗಿಂತ ಹೇಗೆ ಭಿನ್ನವಾಗಿವೆ? ಓದಿ....

(8ನೇ ಪುಟ ನೋಡಿ)

ಸಾಂಸ್ಕೃತಿಕ ರಂಗದ ಮುಖವಾಡಗಳು

ಜಿ. ಎನ್. ಮೋಹನ್

ಸಾಂಸ್ಕೃತಿಕ ರಂಗದಲ್ಲಿಯೂ ತಮ್ಮ ವಿಷದ ನಾಲಿಗೆಯನ್ನು ಚಾಚಿರುವ ವಿದೇಶಿ ಹಣದ ಬಗ್ಗೆ ಈ ಲೇಖನದಲ್ಲಿ ಜಿ. ಮೋಹನ್ ವಿವರಿಸುತ್ತಾರೆ.
ಎಡ ಕ್ರಿಶ್ಚಿಯನ್ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಸಂಬಂಧಿಸಿದ ವಿಶೇಷ ಪುರವಣಿಯಲ್ಲಿ ಬರಬೇಕಾಗಿದ್ದ ಲೇಖನ ಸ್ಥಳಾಭಾವದಿಂದ ಈ ಸಂಚಿಕೆಯಲ್ಲಿ ಬರುತ್ತಿದೆ.

ರಂಗಭೂಮಿ ಅತ್ಯಂತ ವಿಶಿಷ್ಟವಾದ ಮಾಧ್ಯಮ. ಒಂದೇ ಏಟಿಗೆ ಸಾವಿರಾರು ಜನರನ್ನು ಹಿಡಿದಿಡಬಲ್ಲ, ಅವರ ಸಿಟ್ಟು ಸಿರಿಗೆ ದನಿಯಾಗಬಲ್ಲ ಶಕ್ತಿ ಈ ರಂಗಭೂಮಿ ಇರುವುದರಿಂದಲೇ ಎಲ್ಲರ ಕಣ್ಣು ಇದರ ಮೇಲೇ. ಅಂದಾಗ ಇನ್ನು ನಮ್ಮ "ಸ್ವಯಂ ಸೇವೆಯಗಳಿಗಳು"ಸುಮ್ಮನಿರಲು ಹೇಗೆ ಸಾಧ್ಯ.

ರಂಗಭೂಮಿಗೂ ಈಗ ಕಾರ್ಯಪ್ರವೃತ (Action group) ಗುಂಪುಗಳಿಗೂ ನೆಂಟಸ್ತನ ಬೆಳೆದದ್ದು ಇತೀಚೆಗೇ ಆದರೂ ಅವು ರಂಗಭೂಮಿಯನ್ನು ಆಕ್ರಮಿಸುತ್ತಿರುವ ಶೈಲಿ ಭಯ ಹುಟ್ಟಿಸುವಷ್ಟು ಬಿರುಸಾಗಿದೆ. ಹೀಗೆ ಸಾಂಸ್ಕೃತಿಕ ಕ್ಷೇತ್ರಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವುದು ಈ ಸ್ವಯಂ ಸೇವೆಯ ಸಂಸ್ಥೆಗಳ ಮಹತ್ವದ ಗುರಿ."ರಂಗಸೇವೆ" [illegible] ಜಿಲ್ಲೆ ಜಿಲ್ಲೆಗೆ, ಮೂಲೆ ಮೂಲೆಗೆ ರಂಗಭೂಮಿ" "ಜನ ಸಾಮಾನ್ಯನಿಗೆ ನಾಟಕನೋಡುವ ಅವಕಾಶ" ಹೀಗೆ ಅತ್ಯಂತ ನಾಜೂಕಾದ ಘೋಷಣೆಗಳನ್ನು ಹೊತ್ತು ಈಗುಂಪುಗಳು ಕುಡಿಯೊಡೆಯುತ್ತಿವೆ.

ಕರ್ನಾಟಕದಾದ್ಯಂತ ಎರಡು ರೀತಿಯ ಈ ಗುಂಪುಗಳ "ಸೇವೆ" ಕಂಡು ಬರುತ್ತವೆ. ಒಂದು ಈ ಗುಂಪುಗಳೇ ಪ್ರತ್ಯೇಕವಾಗಿ ತಂಡವನ್ನು ರಚಿಸಿಕೊಳ್ಳುವುದು ಎರಡು ಈಗಾಗಲೇ ಜನಪ್ರಿಯವಾಗಿರುವ ತಂಡಗಳಲ್ಲಿ ತಮ್ಮ ಕಾರ್ಯಕರ್ತರನ್ನು "ಛೂ" ಬಿಡುವುದು. ನಮ್ಮ ಕರ್ನಾಟಕದ ರಂಗತಂಡಗಳಲ್ಲಿ ಈ ತಲೆಗಳು ಈಗಾಗಲೆ ನುಸುಳಿರುವ ವಾಸನೆ ಮೂಗಿಗೆ ಬಡಿಯುತ್ತಿದೆ.

ರಂಗಭೂಮಿಯಲ್ಲಿ ಈ ಗುಂಪುಗಳು ತಲೆ ಹಾಕತೊಡಗಿದ್ದು, 'ಫೋರ್ಡ್ ಫೌಂಡೆಶನ್‌ನ ಮೂಲಕ' ದೆಹಲಿಯಲ್ಲಿ ಬೀಡುಬಿಟ್ಟಿರುವ ಪುಷ್ಪಾಸುಂದರ್ ಫೋರ್ಡ್‌ಫೌಂಡೆಶನ್‌ನ ಮುಖ್ಯಸ್ಥೆ. ಕರ್ನಾಟಕದ ಜನಪ್ರಿಯ ರಂಗಕರ್ಮಿ ಬಿ.ವಿ. ಕಾರಂತರ ಮೂಲಕ ಪುಷ್ಪಾಸುಂದರ್ ರಂಗತಂಡಗಳಿಗೆ ಧನ ಸಹಾಯ ಮಾಡುವ ತಮ್ಮ ಯೋಜನೆ ಮುಂದಿಟ್ಟರು. ಉಡುಪಿಯ ಕು.ಶಿ. ಹರಿದಾಸ್ ಭಟ್ ಈ ಯೋಜನೆಗೆ ತಕ್ಷಣವೇ ತಮ್ಮನ್ನು ಒಪ್ಪಿಕೊಂಡರು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮೊತ್ತಮೊದಲ ಸಭೆ ನಡೆಯಿತು. ರಂಗಭೂಮಿಯ ಗಣ್ಯರು ಈ ಸಭೆಯಲ್ಲಿ ಭಾಗವಹಿಸಿದ್ದರು. ನಂತರ ಈ ಬಿಳಲುಗಳು ಎಲ್ಲಾ ಕಡೆಗೂ ಹರಡತೊಡಗಿತು.

ಸ್ವಯಂ ಸೇವೆಯಸಂಸ್ಥೆಗಳ ಉದ್ದೇಶ ಇಷ್ಟಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಹಳ್ಳಿಯ ಹಿಂದುಳಿದ ಜನಾಂಗಗಳನ್ನು ಆವರಿಸುವುದು ಅವರ ನಿಜವಾದ ಉದ್ದೇಶವಾಗಿತ್ತು. ಅದರ ಫಲವಾಗಿ ಹುಟ್ಟಿದ್ದು ನೀನಾಸಂನ ಜನಸ್ಪಂದನ ಯೋಜನೆ. ಜನರೊಡನೆ ಸ್ಪಂದಿಸುವುದು ಎಂಬ ಹೆಸರಿನಲ್ಲಿ ಫೋರ್ಡ್ ಗ್ರಾಮೀಣ ಕರ್ನಾಟಕದಲ್ಲಿ ರಂಗಸಂಸ್ಕೃತಿ ಮತ್ತು ಚಿತ್ರ ಸಂಸ್ಕೃತಿಗಳನ್ನು ಬೆಳೆಸಲು ಎರಡು ವರ್ಷದ ಯೋಜನೆ ಸಿದ್ಧಪಡಿಸಿತು [ಸೆಪ್ಟೆಂಬರ್ 83 ಸೆಪ್ಟೆಂಬರ್ 85]

ಈ ಯೋಜನೆಯಡಿ ಈಗಾಗಲೆ ಹೆಗ್ಗೋಡು ಬಸವಕಲ್ಯಾಣ, ಹಮ್ನಾಬಾದ್, ಕಿತ್ತೂರು, ಮಂಚಿಕೇರಿ, ಗದಗ, ಸಿರಸಿ, ಅಂಬಿಕಾನಗರ, ಬಸವಾನಿ, ಚಿಗಟೇರಿ, ಇಳಕಲ್, ತಾಳಗುಪ್ಪ, ಶ್ಯಾಮನೂರು, ಕನಕಪುರ, ಕಲ್ಯಾಣಪುರ, ಬಸಗೋಡು, ಕೋಣಂದೂರು ಮುಳ್ಕಿ, ಅಕೋಲಾಂ ಅವರ್ಸೆ ಮುಂತಾದ ಹಳ್ಳಿಗಳಲ್ಲಿ 14 ರಂಗ ಶಿಬಿರಗಳನ್ನು 38 ಚಿತ್ರ ಶಿಬಿರಗಳನ್ನು ಏರ್ಪಡಿಸಿದೆ. ಮಂಚಿಕೇರಿಯ "ಸಿದ್ಧಿ" ಬುಡಕಟ್ಟು ಜನಾಂಗದ ಜೊತೆ ಸುಮಾರು ತಿಂಗಳುಗಳ ಕಾಲ ಬೀಡು ಬಿಟ್ಟ ಈತಂಡ ಅವರನ್ನು"ಸಂಘಟಿಸಿ" ಸಿದ್ದಿಗಳಿಗೆ ತರಬೇತಿ ನೀಡಿ 'ಕಪ್ಪುಜನ ಕೆಂಪು ನೆರಳು' ಎಂಬ ಅಚಿಬೆಯವರ ನಾಟಕವನ್ನು ಸಿದ್ಧಪಡಿಸಿತು. ಮೇಲು ನೋಟಕ್ಕೆ ಹಳ್ಳಿಗಳಿಗೆ ನಾಟಕಗಳನ್ನು ಒಯ್ಯುವುದು ಕ್ರಾಂತಿಕಾರಕವಾಗಿ ಕಂಡರೂ ಅದರ ಆಳದ ಉದ್ದೇಶಗಳು ಸ್ಪಷ್ಟವಾದಾಗ ಈ ಯೋಜನೆ ಎಷ್ಟು ಅಪಾಯಕಾರಿ ಎಂಬುದರ ಅರಿವು ಮೂಡುತ್ತದೆ.

ಈ ಬಗ್ಗೆ ಸಮಾಜ ಪ್ರತಿಕ್ರಿಯಿಸುವ ವಿಧಾನವೇ ಬೇರೆ. ಈ "ಸಾಹಸ" ಗಳಲ್ಲೇ ಅತ್ಯಂತ ಪ್ರಗತಿಪರ ರಂಗಸೇವೆಯ ರೀತಿ ಕಾಣ ಬರುತ್ತದೆ. 'ಜನಸ್ಪಂದನ' ಹೊರತಂದ 'ಕಪ್ಪುಜನ ಕೆಂಪು ನೆರಳು'ಕರಪತ್ರವನ್ನೇ ನೋಡಿ.

ಆಧುನಿಕ ನವನಾಗರೀಕತೆಯ ಸೋಂಕೂ ತಿಳಿಯದ ಸಣ್ಣ ಊರಿನ ಜನ ಗಂಭೀರ ಸಂವಹನೆಯಲ್ಲಿ ಸಾಂಗತ್ಯಗೊಳ್ಳುವುದಿಲ್ಲನೆಂಬ ನಮ್ಮ ಕೇಂದ್ರೀಕೃತ ವ್ಯವಸ್ಥೆ ರೂಪಿಸಿದ ಭ್ರಮೆಯನ್ನು ಮಂಚಿಕೇರಿಯಂಥ ನೆಲ ಸುಳ್ಳೆಂದು ಸಾಬೀತುಪಡಿಸಿದೆ. ಹಲವಾರು ವರ್ಷಗಳಿಂದ ಸಾಂಸ್ಕೃತಿಕ ಸಾಮಾಜಿಕ ಕಾರ್ಯಕ್ರಮಗಳನ್ನು ಸಾದರಪಡಿಸುತ್ತ ಬಂದ ಇಲ್ಲಿಯ ಸಂಘಟನೆ ಇದೀಗ ಹೊಸದೊಂದು ಅರ್ಥಪೂರ್ಣ ಆವರಣವನ್ನೇ ಸೃಜಿಸಿದೆ. 'ನೀನಾಸಂ ಜನಸ್ಪಂದನ ಯೋಜನೆಯಡಿಯಲ್ಲಿ' ಸಿದ್ಧ ಕಲಾರಂಗವೊಂದನ್ನು ರೂಪಿಸಿದ. ಇದುಇಲ್ಲಿಯನಿವಾಸಿಗಳೇ ಆಗುತ್ತಿರುವ ಸಿದ್ದಿ ಜನರನ್ನು ಸಂಘಟಿಸಿ ಇವತ್ತಿನ ಸಮಾಜದ ಬದುಕಿಗೆ ಜೀತಮುಕ್ತರಾಗಿ ತೆರೆದುಕೊಳ್ಳುವ, ತೊಡಗಿಸಿಕೊಳ್ಳುವ ಮಹತ್ವದಕ್ರಿಯಾತ್ಮಕರಚನೆಯಾಗಿದೆ.

'ಮುನ್ನುಡಿ' [ಸಿದ್ದಾಪುರ ವರದಿ]

ಎರಡು ವರ್ಷಗಳ ಜನಸ್ಪಂದನದ ಈ ಯೋಜನೆಗೆ ಫೋರ್ಡ್ ಫೌಂಡೇಶನ್ ನೀಡಿದ್ದು ಇಡೀ ಕರ್ನಾಟಕ ನಾಟಕ ಅಕಾಡೆಮಿಯ ಬಜೆಟ್‌ನ ಎರಡುಪಟ್ಟು. ಇಲ್ಲಿಯ ಅಪಾಯವನ್ನು ಗಮನಿಸಿ ಕರ್ನಾಟಕ ನಾಟಕ ಅಕಾಡೆಮಿ ಒಂದು ವರ್ಷದಲ್ಲಿ ಏದುತ್ತಾ ನಡೆಸುವ ಕಾರ್ಯಕ್ರಮಗಳನ್ನು ಲೀಲಾಜಾಲವಾಗಿ ಒಂದು ಸಂಸ್ಥೆ ನಡೆಸಿಬಿಡಬಹುದು. ಕರ್ನಾಟಕ ನಾಟಕ ಅಕಾಡೆಮಿ ತನ್ನ ಯೋಜನೆಯಿಂದ ಮುಟ್ಟುವ ಎರಡು ಪಟ್ಟು ಜನರನ್ನು ಜನಸ್ಪಂದನ ಮುಟ್ಟಿರುತ್ತದೆ. ಅಂದರೆ ಸರ್ಕಾರದ ವತಿಯಿಂದ ನಡೆಯುವ ಅಕಾಡೆಮಿಯಿಂದ ಜನತೆ ದೂರವಾಗಿ ಫೋರ್ಡ್ ನಡೆಸುವ ಜನಸ್ಪಂದನದತ್ತ ಆಕರ್ಷಿತರಾಗುವ ಸಂಭವವೇ ಹೆಚ್ಚು. ಸರ್ಕಾರದ ಅಕಾಡೆಮಿ ಯೋಜನೆ, ಫೋರ್ಡ್‌ನ ವಿದೇಶಿ ಹಣ ಇವುಗಳಲ್ಲಿ ಫೋರ್ಡ್‌ನ ಕೈಯೇ ಮೇಲಾಗುತ್ತದೆ. ಈಗಾಗಲೇ ಈ ಜನಸ್ಪಂದನ ಯೋಜನೆಯಲ್ಲಿ ನಿರ್ದೇಶಕ, ತಂತ್ರಜ್ಞರ, ಕಲಾವಿದರ ದೊಡ್ಡ ಗುಂಪೇ ಕೆಲಸ ಮಾಡುತ್ತಿದೆ.

ಇವುಗಳ ಜೊತೆಯಲ್ಲಿಯೆ ನೀನಾಸಂ 'ತಿರುಗಾಟ'ವನ್ನು ಕೂಡಾ ಸಂಘಟಿಸಿದೆ. 'ಫೋರ್ಡ್‌ನ ಯೋಜನೆ ಈ ಹಿಂದೆಯೇ ಮುಗಿದು ಹೋಗಿದೆ. ಈಗ ನಮ್ಮದು ಸ್ವಚ್ಛವಾದ ತಿರುಗಾಟ'ಎಂದು ಹೇಳಿಕೊಂಡು ಹಳ್ಳಿಯ ಮೂಲೆ ಮೂಲೆಗೆ ಹೋಗಿ ನಾಟಕವಾಡುವ ಈ ಯೋಜನೆಯಲ್ಲಿ ನೀನಾಸಂ ಪ್ರತಿ ವರ್ಷ ಕನಿಷ್ಠ 400 ಹಳ್ಳಿಗಾದರೂ ಭೇಟಿ ಕೊಡುತ್ತದೆ. ಮಾತುಕತೆ ನಡೆಸುತ್ತದೆ. ಕೈ ಕುಲುಕುತ್ತದೆ, ಸಂಬಂಧ ಕುದುರಿಸಿಕೊಳ್ಳುತ್ತಿದೆ. ಬಗಲಿಗೆ ಹಾಕಿಕೊಳ್ಳುತ್ತದೆ. ನೀನಾಸಂನ ನಾಟಕಗಳನ್ನು ಬರಮಾಡಿಕೊಳ್ಳುವ ಸ್ಥಳೀಯ ಸಂಘಟನೆಗಳಿಗೆ'ಬೋನಸ್' ಆಕರ್ಷಣೆಗಳೂ ಉಂಟು. ಎಲ್ಲಾ ರಂಗ ತಂಡಗಳಿಗೂ 'ನೀನಾಸಂ ನಂಬಿಕೆಗೆ ಬದ್ಧವಾದ ತಂಡಗಳಿಗೆ' ಸುಮಾರು ಮೂವತ್ತು ಸಾವಿರದಷ್ಟು ರಂಗ ಪಕರಣಗಳ ಇನಾಮು ದೊರೆಯುತ್ತದೆ. ಈ ಇನಾಮಿಗಾಗಿಯೇ ನೀನಾಸಂ ಯೋಜನೆಗಳಿಗೆ ಬದ್ಧವಾದ ಹಲವು ತಂಡಗಳುಂಟು.

ಈ ರೀತಿ ಕರ್ನಾಟಕದಲ್ಲಿ ಹೆಚ್ಚು ಹಣ ತೆಗೆದುಕೊಳ್ಳುತ್ತಿರುವ ಮತ್ತೊಂದು ಸಂಸ್ಥೆ 'ಡಾಕ್ಯುಮೆಂಟೇಶನ್ ಆಫ್ ಫೋಕ್ ಫಾರ್ಮ್ಸ್'ನ ಅಧ್ಯಯನಕ್ಕೆ ಕು ಶಿ. ಹರಿದಾಸ್ ಭಟ್‌ರವರ ಉಡುಪಿಯ ರಂಗ ಕಲೆಗಳ ಅಧ್ಯಯನ ಕೇಂದ್ರ ಇದಲ್ಲದೇ ಮಂಚಿಕೇರಿಯ ರಾಜರಾಜೇಶ್ವರಿ ವಿದ್ಯಾಸಂಸ್ಥೆ, ಮಂಗಳೂರಿನ'ಆಯನ'ಸಕ್ರೀಯವಾಗಿ ಚಟುವಟಿಕೆ ನಡೆಸುತ್ತಿದೆ.

ಇದು ಒಂದು ರೀತಿಯಾದರೆ ಕೆಲವು ಸ್ವಯಂ ಸೇವಾ ಸಂಸ್ಥೆಗಳೇ ತಾವೊಂದು ತಂಡವನ್ನು ಹುಟ್ಟಿಹಾಕುವುದೂ ಉಂಟು. ತಮ್ಮ ಸಂಸ್ಥೆಗೂ ಇದಕ್ಕೂ ಸಂಬಂಧವೇ ಇಲ್ಲವೆನಿಸುವಂತೆ ಆ ತಂಡಕ್ಕೆ ಒಂದು ಆಕರ್ಷಕ ಹೆಸರೂ ಸಹ ಇರುತ್ತದೆ. ಬೆಂಗಳೂರಿನ 'ಸಿಯಡ್ಸ್' [CIEDS] ಸಂಸ್ಥೆಯ'ವಿಮೋಚನಾ ತಂಡ' ಇದಕ್ಕೊಂದು ಉದಾಹರಣೆ. ಬೆಂಗಳೂರಿನ ಕೊಳಚೆಕೇರಿಗಳಲ್ಲಿ, ಹಿಂದುಳಿದ ಬಡಾವಣೆಗಳಲ್ಲಿ ನಾಟಕಗಳನ್ನುಪ್ರದರ್ಶಿಸುವ ಇದು ಸಿಯಡ್ಸ್‌ನ ಅಂಗ ಸಂಸ್ಥೆ. ಕೆಲವು ಸಂಸ್ಥೆಗಳು ಇತ್ತೀಚೆಗೆ ಬೆಂಗಳೂರಿನಲ್ಲಿ ಬೀದಿ ನಾಟಕ ಕುರಿತು ಹತ್ತುದಿನಗಳ ಕಾರ್ಯಾಗಾರವನ್ನು ಕೂಡಾ ನಡೆಸಿತು.

ರಂಗಭೂಮಿಯೊಂದೇ ಅಲ್ಲದೆ ಚಿತ್ರರಂಗಕ್ಕೂ ಈ ಸಂಸ್ಥೆಗಳು ಕಾಲಿಟ್ಟಿವೆ. ನೀನಾಸಂ ಹೆಗ್ಗೋಡು ಹಲವು ಚಿತ್ರ ಶಿಬಿರಗಳನ್ನು ಹಳ್ಳಿಹಳ್ಳಿಯಲ್ಲಿ ಜನಸ್ಪಂದನದ ಯೋಜನೆಯಡಿಯಲ್ಲಿ ನಡೆಸಿದೆ.ಇದಲ್ಲದೆ ಬೆಂಗಳೂರಿನ'ಸಿಯಡ್ಸ್' ಹಲವು ಚಿತ್ರ ಸಂಸ್ಥೆಗಳೊಡನೆ ಸೇರಿ ಚಿತ್ರೋತ್ಸವಗಳನ್ನು ನಡೆಸುತ್ತದೆ. ಕ್ಯೂಬ ಚಲನ ಚಿತ್ರಗಳ ಉತ್ಸವ, ವಿಯೆಟ್ನಾಂ ಚಲನ ಚಿತ್ರಗಳ ಉತ್ಸವ ಹೀಗೆ ಪ್ರೇಕ್ಷಕರಿಗೆ ಕುತೂಹಲ ಹುಟ್ಟಿಸುವ ಚಲನ ಚಿತ್ರಗಳನ್ನು ಗುಡ್ಡೆಹಾಕಿ ಚಿತ್ರೋತ್ಸವ ನಡೆಸಿ ತಮ್ಮತ್ತ ಜನರನ್ನು ಆಕರ್ಷಿಸುತ್ತಾರೆ.

'ಯುದ್ಧ' 'ಶಾಂತಿ' 'ಅಣ್ವಸ್ತ್ರ' ಇವುಗಳ ಬಗ್ಗೆಯೇ ಈ ಸೇವಾ ಸಂಸ್ಥೆಗಳೂ ಸಹ ಮಾತನಾಡುವುದು ಜನರನ್ನು ದಿಕ್ಕುತಪ್ಪಿಸಲು ಸಹಾಯ ಮಾಡುತ್ತದೆ. ಹಿರೋಶಿಮಾ, ನಾಗಸಾಕಿ ಬಾಂಬ್‌ದುರಂತಗಳು,ಮೊದಲ ಮತ್ತು ಎರಡನೆಯ ಮಹಾಯುದ್ಧದ ವಿಕೃತಿಗಳನ್ನು ಇವರು ಪ್ರದರ್ಶಿಸುತ್ತಾರೆ. ಇದರ ಇತ್ತೀಚಿನ ಬೆಳವಣಿಗೆಯೆಂದರೆ ಶಾಲಾ ಕಾಲೇಜುಗಳಿಗೆ ಹೋಗಿ ಉಚಿತ ಚಿತ್ರ ಪ್ರದರ್ಶನ ನೀಡಿ ವಿದ್ಯಾರ್ಥಿಗಳನ್ನು ತಮ್ಮ ಸಂಸ್ಥೆಯ ಸದಸ್ಯರನ್ನಾಗಿಸಿಕೊಳ್ಳುವುದು. 'ಸಿಯಡ್ಸ್' ಈ ಯೋಜನೆಯನ್ನು ಹುಟ್ಟುಹಾಕಿದೆ.

ಇದಲ್ಲದೇ ಸಾಹಿತ್ಯಗೋಷ್ಠಿ, ಸೆಮಿನಾರ್‌ಗಳು, ಪೋಸ್ಟರ್ ಪ್ರದರ್ಶನ, ಈ ಸಂಸ್ಥೆಗಳ ಇತರೆ ಮುಖವಾಡಗಳು. ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಪ್ರತೀ ವರ್ಷ ಎಲ್ಲಾ ಪ್ರಮುಖ ಸಾಹಿತಿಗಳನ್ನು ಒಳಗೊಂಡ ಸಾಹಿತ್ಯ ಚರ್ಚೆ ನಡೆಸಲಾಗುತ್ತದೆ. ಹೀಗೆ ಸಾಂಸ್ಕೃತಿಕ ರಂಗದ ಈ 'ಮುಖವಾಡಗಳು' ಹಲವು ರೀತಿಯಲ್ಲಿ ಕೆಲಸ ಮಾಡುತ್ತಿದೆ.

○

ಕೆ. ಎಸ್. ರವರಿಗೆ ಅಸನ್ ಪ್ರಶಸ್ತಿ

'ಮೈಸೂರು ಮಲ್ಲಿಗೆ'ಯ ಮೂಲಕ ಅತ್ಯಂತ ಜನಪ್ರಿಯರಾದ ಕನ್ನಡದ ಕೆ.ಎಸ್. ನರಸಿಂಹಸ್ವಾಮಿಯವರಿಗೆ ಈ ಬಾರಿಯ 'ಮಹಾಕವಿಕುಮಾರ ಅಸನ್' ಪ್ರಶಸ್ತಿ ದೊರಕಿದೆ. ಅವರಿಗೆ ಅಭಿನಂದನೆಗಳು.

ಮತ್ತೆ ಸ್ವರ್ಣಕಮಲ

ಕನ್ನಡ ಚಿತ್ರರಂಗಕ್ಕೆ ಚಲನ ಚಿತ್ರಗಳ ಸಾಲನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ನೀಡುವ ಉನ್ನತ ಪ್ರಶಸ್ತಿ 'ಸ್ವರ್ಣ ಕಮಲ'ವನ್ನು ಮತ್ತೆ ತನ್ನ ಮುಡಿಲಿಗೆ ಹಾಕಿಕೊಂಡಿದೆ.

ಇನ್ನೂ ತೆರೆ ಕಾಣದ ಪೂರ್ಣಚಂದ್ರ ತೇಜಸ್ವಿಯವರ ಕಥೆ ಆಧಾರಿತ 'ತಬರನ ಕತೆ' ಚಿತ್ರಕ್ಕಾಗಿ ಈ ಬಾರಿಯ ಸ್ವರ್ಣ ಕಮಲ. ಈ ಹಿಂದೆ ತಮ್ಮ 'ಘಟಶ್ರಾದ್ಧ' ಚಿತ್ರಕ್ಕಾಗಿ ಪ್ರಶಸ್ತಿ ಪಡೆದಿದ್ದ ಗಿರೀಶ್ ಕಾಸರವಳ್ಳಿ ಈ ಚಿತ್ರದ ನಿರ್ದೇಶಕರು.

ಈ ಚಿತ್ರದ ಜೊತೆಯಲ್ಲಿಯೇ ಅತ್ಯುತ್ತಮ ಪ್ರಾದೇಶಿಕ ಚಲನ ಚಿತ್ರ ಪ್ರಶಸ್ತಿಯನ್ನು 'ಶಂಕನಾದ' ಚಿತ್ರಕ್ಕೆ ನೀಡಲಾಗಿದೆ. ಶಂಕರ್‌ನಾಗ್‌ರವರ ಆರ್.ಕೆ. ನಾರಾಯಣ್ ಕಾದಂಬರಿ ಆಧಾರಿತ 'ಮಾಲ್ಗುಡಿ ದಿನಗಳು' ಬಿ.ವಿ. ಧಾರಾವಾಹಿಗೆ ಸೃಜನೇತರ ಪ್ರಶಸ್ತಿ

ಸಾಂಸ್ಕೃತಿಕ ರಂಗ

ದೊರತಿದೆ. 86ರ ಸಾಲಿನ ಅತ್ಯುತ್ತಮ ನಟ ಪ್ರಶಸ್ತಿಯನ್ನು ತಬರನ ಕತೆಯ ನಾಯಕ ಚಾರುಹಾಸನ್‌ರವರಿಗೆ ನೀಡಲಾಗಿದೆ.ಮೋನಿಷಾ ಅತ್ಯುತ್ತಮ ನಟಿ.

ನಿರಂಜನರ ಸಮಗ್ರ ಸಂಕಲನ ಬಿಡುಗಡೆ

ನಿರಂಜನರ ಕತೆ, ಕಾದಂಬರಿ, ಲೇಖನ, ಭಾಷಣ, ಸಂದರ್ಶನಗಳನ್ನೊಳಗೊಂಡ ಸಮಸ್ತ ಸಾಹಿತ್ಯ ಸಂಕಲನವನ್ನು ತರುವ ಯೋಜನೆಯನ್ನು ಬೆಂಗಳೂರಿನ ಇಂಡಿಯನ್ ಬುಕ್ ಹೌಸ್ ಪ್ರಕಾಶನ ಸಂಸ್ಥೆ ಹಮ್ಮಿಕೊಂಡಿದೆ. ಹದಿನೈದು ಸಾವಿರ ಪುಟಗಳಿಗಿಂತಲೂ ಹೆಚ್ಚು ಸಾಹಿತ್ಯವನ್ನೊಳಗೊಂಡ ಈ ಸಂಕಲನವನ್ನು ಮೂವತ್ತು ಕ್ಯಾಲಿಕೋ ಸಂಪುಟಗಳಲ್ಲಿ ಹೊರ ತರಲಾಗುತ್ತದೆ.

ನಿರಂಜನರು ಸುಮಾರು ನಲವತ್ತು ವರ್ಷಗಳಲ್ಲಿ ಬರೆದ ಈ ಸಾಹಿತ್ಯ ಸಂಕಲನದ ಮೊದಲ ಕಂತನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಯಿತು. ನೂರೈವತ್ತಾರು ಕಥೆಗಳ ಮೊದಲ ಎರಡು ಸಂಪುಟಗಳು ಈಗ ಮಾರುಕಟ್ಟೆಯಲ್ಲಿದೆ. ಬೆಲೆ ದುಬಾರಿ ಎನಿಸಿದರೂ ನಿರಂಜನರನ್ನು ಒಂದೇ ಕಡೆ ಒಟ್ಟು ಹಾಕುವ ಈ ಕೆಲಸ ಸ್ತುತ್ಯಾಹನ.

ಆಫ್ರಿಕಾ ಉತ್ಸವ

ಕತ್ತಲಲ್ಲಿಯೇ ಉಳಿದಿರುವ ಆಫ್ರಿಕಾ ಸಂಸ್ಕೃತಿಯನ್ನು ಪಂಚಯ ಮಾಡಿ ಕೊಡುವ ಉದ್ದೇಶದಿಂದ

[6ನೇ ಪುಟ ನೋಡಿ]

ಯು. ಬಿ. ಕಾರ್ಮಿಕರು ಹೋರಾಟದ ಕಣದಲ್ಲಿ

ಬೆಂಗಳೂರು ನಗರದ ಯುನೈಟೆಡ್ ಬ್ರೂವರೀಸ್ ಕಾರ್ಮಿಕರು ಆಡಳಿತ ಮಂಡಳಿಯ ದೌರ್ಜನ್ಯದ ವಿರುದ್ಧ ತೀವ್ರ ಹೋರಾಟ ನಡೆಸುತ್ತಿದ್ದಾರೆ. ಕಾರ್ಮಿಕರು ಮಂಡಿಸಿದ ಬೇಡಿಕೆಗಳನ್ನು ಈಡೇರಿಸುವ ಬದಲು ಆಡಳಿತ ವರ್ಗ ಕಾರ್ಮಿಕರ ಎದುರು ತನ್ನದೇ ಆದ ಬೇಡಿಕೆಗಳನ್ನು ಮುಂದಿಟ್ಟಿತು. ವೇತನವನ್ನು ಉತ್ಪಾದನೆಯೊಂದಿಗೆ ಸಮೀಕರಿಸುವ ಮತ್ತು ಕಾರ್ಮಿಕರ ಹಕ್ಕು, ಸೌಲಭ್ಯಗಳನ್ನು ಮೊಟಕುಗೊಳಿಸುವ ಅಂಶಗಳು ಆಡಳಿತ ಮಂಡಳಿಯ ಬೇಡಿಕೆಯಲ್ಲಿದೆ. ಇದರ ವಿರುದ್ಧ ಪ್ರತಿಭಟಿಸಿದಾಗ ಆಡಳಿತ ವರ್ಗ 1985ರ ಆಗಸ್ಟ್‌ನಲ್ಲಿ ದಿಢೀರನೆ ಅಕ್ರಮ ಬೀಗಮುದ್ರೆ ಹಾಕಿ ಕೆಲಸಗಾರರನ್ನು ಹತ್ತಿಕ್ಕಲು ಪ್ರಯತ್ನಿಸಿತು. ಕಾರ್ಮಿಕರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿತು. ರಾಜ್ಯಸರ್ಕಾರ ವಿವಾದವನ್ನು ಕಾರ್ಮಿಕ ನ್ಯಾಯಾಲಯಕ್ಕೆ ಕಳುಹಿಸಿ ಬೀಗ ಮುದ್ರೆಯನ್ನು ಬಹಿಷ್ಕರಿಸಿದಾಗ ಆಡಳಿತ ಮಂಡಳಿ ನಿರ್ವಾಹವಿಲ್ಲದೆ ಬೀಗ ಮುದ್ರೆಯನ್ನು ಹಿಂತೆಗೆದುಕೊಂಡಿತು. ಆದರೆ ಕಾರ್ಮಿಕರನ್ನು ಅಮಾನತ್ತಿನಲ್ಲಿಡುವ ವಜಾ ಮಾಡುವ ಕುಟಿಲೋಪಾಯವನ್ನು ಅನುಸರಿಸುತ್ತಿದೆ. ಈವರೆಗೆ 11ಮಂದಿ ಕಾರ್ಮಿಕರ ಮುಖಂಡರನ್ನು ಕೆಲಸದಿಂದ ವಜಾಮಾಡಲಾಗಿದೆ. 14ಕಾರ್ಮಿಕರನ್ನು ಅಮಾನತ್ತಿನಲ್ಲಿಟ್ಟು ವಜಾ ಮಾಡುವ ಉದ್ದೇಶದಿಂದ ವಿಚಾರಣೆಯನ್ನು ನಡೆಸುತ್ತಿದೆ. ಕಾರ್ಖಾನೆಗೆ ರಜೆ ಇದ್ದ ಒಂದು ದಿನ ರಾತ್ರಿಯ ವೇಳೆ ಕಾರ್ಖಾನೆಯ ಆವರಣದೊಳಗಿದ್ದ ಸಂಘದ ಕಛೇರಿಯನ್ನು ಧ್ವಂಸ ಮಾಡಿ ಕೊಠಡಿಯಲ್ಲಿದ್ದ ಸಕಲ ವಸ್ತುಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಆಡಳಿತ ವರ್ಗ ತನ್ನ ಗೂಂಡಾ ಸ್ವಭಾವವನ್ನು ಪ್ರಕಟಿಸಿದೆ.

ಬೆಂಗಳೂರಿನಲ್ಲಿ ಈ ರೀತಿ ಕೆಲಸಗಾರರ ಮೇಲೆ ದಬ್ಬಾಳಿಕೆ ನಡೆಸುತ್ತಿರುವ ಸಂದರ್ಭದಲ್ಲೇ ಆಡಳಿತ ಮಂಡಳಿ ತನ್ನ ಗೋವಾ ಕಾರ್ಖಾನೆಯನ್ನು 10ತಿಂಗಳ ಕಾಲ ಬೀಗ ಮುದ್ರೆಯಲ್ಲಿಟ್ಟು 22 ಮಂದಿ ಕಾರ್ಮಿಕರ ಮುಖಂಡರನ್ನು ವಜಾ ಮಾಡಿದೆ ಮತ್ತು 30 ಕಾರ್ಮಿಕರನ್ನು ಅಮಾನತ್ತುಗೊಳಿಸಿದೆ. ಬೀಗ ಮುದ್ರೆಯನ್ನು ಸರ್ಕಾರ ಅಕ್ರಮವೆಂದು ಘೋಷಿಸಿ ರದ್ದುಗೊಳಿಸಿದ ನಂತರ ಕಾರ್ಮಿಕರು 'ಡಿಸ್‌ಮಿಸ್'ಮತ್ತು 'ಸಸ್ಪೆನ್‌ಶನ್'ಗಳ ವಿರುದ್ಧ ಅನಿರ್ದಿಷ್ಟ ಕಾಲದ ಮುಷ್ಕರ ಹೂಡಿದ್ದಾರೆ.

ಕೇರಳದ ಶೇರ್ತಲೆಯಲ್ಲಿರುವ ಕಾರ್ಖಾನೆಯಲ್ಲಿ ಬೇಡಿಕೆಗಳ ಬಗ್ಗೆ ಹೋರಾಟ ನಡೆಸುತ್ತಿರುವ ಕಾರ್ಮಿಕರನ್ನು ಬೆದರಿಸುವ ಸಲುವಾಗಿ ಮೂವರು ಕಾರ್ಮಿಕರನ್ನು ಆಡಳಿತ ವರ್ಗ ಅಮಾನತ್ತುಗೊಳಿಸಿದೆ.

ಆಲ್‌ಇಂಡಿಯಾ ಯು.ಬಿ.ಗ್ರೂಪ್ ಎಂಪ್ಲಾಯೀಸ್ ಫೆಡರೇಶನ್, ಬೆಂಗಳೂರು ಶೇರ್ತಲೆ,ಮತ್ತು ಗೋವಾದಲ್ಲಿ ನಡೆಯುತ್ತಿರುವ ಹೋರಾಟಗಳನ್ನು ಪರಿಶೀಲಿಸಿ ಇಡೀ ದೇಶದಲ್ಲಿನ ಯು.ಬಿ. ಗ್ರೂಪ್ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಯು.ಬಿ. ಆಡಳಿತ ವರ್ಗದ ದೌರ್ಜನ್ಯದ ವಿರುದ್ಧ ಹೋರಾಟಕ್ಕೆ ಇಳಿಸುವ ಅವಶ್ಯಕತೆಯನ್ನು ಮನಗಂಡು ಮೊದಲನೆಯ ಹಂತವಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿತು. ಈ ಪ್ರಕಾರ ದೇಶಾದ್ಯಂತ ಇರುವ ಯು ಬಿ. ಗ್ರೂಪ್ ಕಾರ್ಖಾನೆಗಳ ಎದುರು ಎಪ್ರಿಲ್13 ರಿಂದ 20ರ ವರೆಗೆ ಧರಣಿ ನಡೆಸುವ ಮತ್ತು ಎಪ್ರಿಲ್21ರಂದು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸುವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಹೋರಾಟಕ್ಕೆ ರಾಜ್ಯ ಮತ್ತು ಜಿಲ್ಲಾ ಸಿ.ಐ.ಟಿ.ಯು. ಹೆಚ್ಚಿನ ಕಾಳಜಿ ವಹಿಸಿ ಬೆಂಬಲ ವ್ಯಕ್ತಪಡಿಸಿವೆ. ಬೆಂಗಳೂರಿನ ಸಿ.ಐ.ಟಿ ಯು.ಸಂಘಗಳ ಕಾರ್ಮಿಕರು ಯು.ಬಿ. ಕಾರ್ಮಿಕರ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ. ಎಂಟು ದಿನಗಳ ಕಾಲ ನಡೆದ ಧರಣಿ ಮುಷ್ಕರದಲ್ಲಿ ರಾಜ್ಯ ಸಿ.ಐ.ಟಿ.ಯು. ಪ್ರ. ಕಾರ್ಯದರ್ಶಿ ಕಾ॥ ಸಿ. ನಂಜುಂಡಪ್ಪ, ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾ॥ ಸೂರ್ಯನಾರಾಯಣ ರಾವ್, ಸಿ.ಪಿ.ಐ.(ಎಂ) ಶಾಸಕರಾದ ಕಾ॥ ಟಿ.ಎಸ್. ಮಣಿ, ಆಲ್‌ಇಂಡಿಯಾ ಕನ್‌ಫೆಡರೇಶನ್ ಆಫ್ ಮರ್ಕೆಂಟೈಲ್ ಅಂಡ್ ಕಮರ್ಶಿಯಲ್ ಎಂಪ್ಲಾಯೀಸ್‌ನ ಪ್ರಧಾನ ಕಾರ್ಯದರ್ಶಿ ಕಾ॥ ರಾಮಪಾದ ಚಕ್ರವರ್ತಿ, ಎ.ಐ.ಟಿ.ಯು.ಸಿ. ಮುಖಂಡರಾದ ಕಾ॥ ಬಾಬೂ ಮ್ಯಾಥ್ಯೂ, ವಕೀಲರ ಸಂಘದ ಕಾ॥ ವೆಂಕಟೇಶಗೌಡ, ರೈತ ಸಂಘದ ಮುಖಂಡ ಕಾ॥ ಪಿ. ಜಗನ್ನಾಥ್, ಸಿ.ಐ.ಟಿ.ಯು. ಮುಖಂಡರಾದ ಕಾ॥ ಟಿ ಎಸ್.ಅನಂತರಾಂ ಮತ್ತು ಕೆ.ಎಸ್. ಸುಬ್ರಹ್ಮಣ್ಯ ಭಾಗವಹಿಸಿ ನೇತೃತ್ವ ನೀಡಿದರು.

21-4-87ರ ಸಾಂಕೇತಿಕ ಮುಷ್ಕರ ಸಂಪೂರ್ಣವಾಗಿ ಯಶಸ್ವಿಯಾಗಿದೆ. ಪೊಲೀಸರ ಸಹಾಯದಿಂದ ಮುಷ್ಕರ ಮುರಿಯುವ ಆಡಳಿತ ವರ್ಗದ ಪಿತೂರಿ ವಿಫಲಗೊಂಡಿದೆ. ಅಂದು ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ಮುಖಂಡರಾದ ಕಾ॥ ಎನ್.ಕೆ. ಉಪಾಧ್ಯಾಯ, ಸೂರ್ಯನಾರಾಯಣ ರಾವ್, ಟಿ.ಎಸ್. ಅನಂತರಾಂ, ಆರ್. ಶ್ರೀನಿವಾಸ್, ಫೆಡರೇಶನ್‌ಆಫ್ ಮರ್ಕೆಂಟೈಲ್‌ಎಂಪ್ಲಾಯೀಸ್‌ಯೂನಿಯನ್‌ನ ಕಾ॥ ಕೆ. ಭಟ್ಟಾಚಾರ್ಯ, ಮತ್ತು ಟಿ.ಕೆ.ಎಸ್. ಕುಟ್ಟಿ ಮಾತನಾಡಿ ಯು.ಬಿ. ಕಾರ್ಮಿಕರ ನ್ಯಾಯಯುತ ಬೇಡಿಕೆಗಳು ಈಡೇರುವವರೆಗೆ ಹೋರಾಟಕ್ಕೆ ತಮ್ಮ ಬೆಂಬಲವನ್ನು ಮುಂದುವರಿಸುವುದಾಗಿ ತಿಳಿಸಿದರು.

ಹೋರಾಟದ ಎರಡನೆಯ ಹಂತದ ಕಾರ್ಯಕ್ರಮವಾಗಿ ದೇಶದಾದ್ಯಂತ ಇರುವ ಯು.ಬಿ. ಕಾರ್ಮಿಕರ ಸಹಿಯನ್ನು ಸಂಗ್ರಹಿಸಿ ಕಂಪೆನಿಯ ಚೇರ್‌ಮನ್ ವಿಜಯ ಮಲ್ಯರವರಿಗೆ ನೀಡಲಾಗುವುದು. ○

ಕೃಷಿ ಕಾರ್ಮಿಕರ ಮನೆ ನಾಶ ರೈತ ಸಂಘದ ಖಂಡನೆ

ಮಂಗಳೂರು ತಾಲೂಕಿನ ಮೂಡುಶೆಡ್ಡೆ ಗ್ರಾಮದ ಸರ್ಕಾರಿ ಸ್ಥಳದಲ್ಲಿ ವಾಸಿಸುತ್ತಿರುವ ಸುಮಾರು 65ಕ್ಕೂ ಮೇಲ್ಪಟ್ಟ ಕೃಷಿಕಾರ್ಮಿಕರ ಬಡ ಕುಟುಂಬಗಳ ಮನೆಗಳನ್ನು ಮೇ 16 ರಂದು ಪೋಲೀಸ್ ಅಧಿಕಾರಿಗಳು ಹಾಗೂ ಇನ್ನಿತರ ಸಹಾಯಕರೊಂದಿಗೆ ಕೆಡವಿ ಹಾಕಿರುವುದನ್ನು ಮಂಗಳೂರು ತಾಲೂಕು ರೈತ ಸಂಘ ತೀವ್ರವಾಗಿ ಖಂಡಿಸಿದೆ. ನಿರಂತರವಾಗಿ ಈ ಕೃಷಿ ಕಾರ್ಮಿಕರ ಮನೆಗಳನ್ನು ನೆಲಸಮ ಮಾಡುವುದು ಹಾಗೂ ಅವರಿಗೆ ನಿರಂತರ ಕಿರುಕುಳ ಕೊಡುತ್ತಿರುವ ಪೋಲೀಸ್ ಅಧಿಕಾರಿಗಳ ಮೇಲೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ಮಂಗಳೂರು ತಾಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ ಒತ್ತಾಯಿಸಿದ್ದಾರೆ. ಈ ಹಿಂದೆ ಸುಮಾರು 15 ದಿನಗಳ ಮುಂಚಿತವಾಗಿ ಇದೇ ಅಧಿಕಾರಿಗಳು ಮೇಲೆ ಹೇಳಿದ ಗ್ರಾಮದಲ್ಲಿ ವಾಸಿಸುತ್ತಿರುವ ಮನೆಗಳನ್ನು ನಾಶಮಾಡಿದರ ವಿರುದ್ಧ ರೈತಸಂಘ ಪ್ರತಿಭಟಿಸಿ ಜಿಲ್ಲಾಧಿಕಾರಿ ಕಛೇರಿ ಮುಂಭಾಗದಲ್ಲಿ ಸತ್ಯಾಗ್ರಹವನ್ನು ನಡೆಸಿತ್ತು. ಈ ಬಾರಿಯು 16.5.87 ರಂದು ಶನಿವಾರ ಬೆಳಗಿನಿಂದ ಮನೆಯಲ್ಲಿದ್ದ ಹೆಂಗಸರು, ಮಕ್ಕಳು ಎನ್ನದೆ ಅವರನ್ನು ಮನೆಯಿಂದ ಹೊರದಬ್ಬಿ ಅವರ ಜೀವನೋಪಯೋಗಿ ವಸ್ತು ಹಾಗೂ ಪಾತ್ರೆ, ಬಟ್ಟೆ ಇತ್ಯಾದಿಗಳನ್ನು ವಶಪಡಿಸಿ ಮನೆಯನ್ನು ಕೆಡವಿ ಹಾಕಲಾಗಿದೆ. ಮಾತ್ರವಲ್ಲ, ಹೆಂಗಸರು ಮಕ್ಕಳ ಇನ್ನಿತರ ಬಡಪಾಯಿ ಕಾರ್ಮಿಕರ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿರುವುದನ್ನು ರೈತ ಸಂಘ ಖಂಡಿಸಿದೆ. ಆದುದರಿಂದ ಸದ್ರಿ ಸ್ಥಳ ನಿವಾಸಿತರಿಗೆ ಕೊಡುತ್ತಿರುವ ಕಿರುಕುಳವನ್ನು ನಿಲ್ಲಿಸಿ ಹಾಗೂ ಅವರಿಗೆ ಮನೆ ನಿವೇಶನಕ್ಕಾಗಿ ಸ್ಥಳವನ್ನು ಮಂಜೂರು ಮಾಡಬೇಕೆಂದು ರೈತ ಸಂಘ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದೆ. ಇಲ್ಲವಾದಲ್ಲಿ ತೀವ್ರರೀತಿಯ ಹೋರಾಟ ಕಾರ್ಯವನ್ನು ಹಾಕಿಕೊಳ್ಳುವುದು ಅನಿವಾರ್ಯವೆಂದು ರೈತ ಸಂಘ ಎಚ್ಚರಿಸಿದೆ. ●

"ಬರಗಾಲ ಪರಿಹಾರ ಕ್ರಮ ಕೈಗೊಳ್ಳಿ"

ಬಳ್ಳಾರಿಜಿಲ್ಲೆಯಲ್ಲಿ ಮಳೆಯಾಗುವ ಲಕ್ಷಣಗಳು ಇನ್ನೂ ಕಂಡು ಬರುತ್ತಿಲ್ಲ. ಬರಗಾಲ ಪರಿಸ್ಥಿತಿಯನ್ನು ಮತ್ತೊಮ್ಮೆ ಎದುರಿಸುವ ಸಂಭವವಿದೆ. ಆದ್ದರಿಂದ ರಾಜ್ಯ ಸರಕಾರ ಈಗಿನಿಂದಲೇ ಬರಗಾಲ ಪರಿಹಾರದ ಕುರಿತು ಕ್ರಮ ಕೈಗೊಳ್ಳುವುದು ಅಗತ್ಯವೆಂದು ನಿನ್ನೆ ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಸಭೆ ಸರಕಾರವನ್ನು ಕೇಳಿಕೊಂಡಿದೆ. ಬಳ್ಳಾರಿಯಲ್ಲಿರುವ ಒಂದೇ ಒಂದು ನೂಲಿನ ಗಿರಣಿ ಮುಚ್ಚಲ್ಪಟ್ಟದ್ದು ಸುಮಾರು ಒಂದು ವರ್ಷವಾದರೂ ಅದನ್ನು ತೆರೆದು ನಿರುದ್ಯೋಗ ಸಮಸ್ಯೆ ಬಗೆಹರಿಸುವ ದೃಷ್ಟಿಯಲ್ಲಿ ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದನ್ನು ಸಮಿತಿ ಬಲವಾಗಿ ಖಂಡಿಸಿ, ನೂಲಿನ ಗಿರಣಿಯನ್ನು ಕೂಡಲೇ ತೆರೆಯಬೇಕೆಂದು ಸರಕಾರವನ್ನು ಒತ್ತಾಯಿಸಿದೆ. ಬಳ್ಳಾರಿಯಲ್ಲಿ ಪಿ.ಜಿ.ಕೇಂದ್ರ ಪ್ರಾರಂಭಿಸುವ ಸಲುವಾಗಿ ರಾಜ್ಯ ಸರಕಾರ ಈಗಾಗಲೇ ನಿರ್ಣಯ ಕೈಗೊಂಡಿದ್ದರೂ ಕೂಡ ಅದನ್ನು ಜಾರಿ ಮಾಡುವಲ್ಲಿ ರಾಜ್ಯ ಸರಕಾರ ವಿಫಲಗೊಂಡಿರುವುದನ್ನು ಖಂಡಿಸಿ, ಈ ವರ್ಷದಿಂದಲೇ ಅದನ್ನು ಪ್ರಾರಂಭಿಸಬೇಕೆಂದು ಒತ್ತಾಯಿಸಿದ. ಸಂಚೂರು ತಾಲೂಕಿನ ನಂದಿಹಳ್ಳಿಯ ಪಿ.ಜಿ.ಕೇಂದ್ರವನ್ನು ಅಭಿವೃದ್ಧಿಪಡಿಸಲು ತೀವ್ರ ಕ್ರಮ ವಹಿಸಲು ಒತ್ತಾಯಪಡಿಸಿದೆ.

ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಶ್ರೀ.ಎನ್.ಕೆ.ಉಪಾಧ್ಯಾಯರು ಪಕ್ಷದ ಸದಸ್ಯರ ಮತ್ತು ಹಿತೈಷಿಗಳ ಸಭೆಯಲ್ಲಿ ಇಂದಿನ ಅಂತರ ರಾಷ್ಟ್ರೀಯ ಪರಿಸ್ಥಿತಿ ರಾಷ್ಟ್ರ ಮತ್ತು ಕರ್ನಾಟಕ ರಾಜ್ಯದಲ್ಲಿಯ ರಾಜಕೀಯ ಪರಿಸ್ಥಿತಿಯ ಕುರಿತು ವರದಿ ಮಾಡಿದರು. ○

ಕೆ. ಜಿ. ಎಫ್. ನಲ್ಲಿ ದ. ಕ. ಆಫ್ರಿಕಾದ ನಾಯಕ ಕಾ| ಜಸ್ಟೀಸ್ ಹಲಾಲೆ

ದಿನಾಂಕ 13-5-87ರಂದು ದಕ್ಷಿಣ ಆಫ್ರಿಕಾದ COSATU ನಾಯಕ ಕಾ| ಜಸ್ಟಿಸ್ ಹಲಾಲೆ ಭಾರತ ಗೋಲ್ಡ್‌ಮೈನ್ಸ್‌ನ ಚಾಂಪಿಯನ್ ಗಣಿಯನ್ನು ವೀಕ್ಷಿಸಲು CITU ಅತಿಥಿಯಾಗಿ ಬಂದಿದ್ದರು.ಆ ದಿನ ಸಾಯಂಕಾಲ ಸ್ಥಳೀಯ ರಾಬರ್ಟ್‌ಸನ್ ಪೇಟೆಯ ಕಿಂಗ್‌ಜಾರ್ಜ್‌ಹಾಲ್‌ನಲ್ಲಿ ಒಂದು ಸಭೆಯನ್ನು ಏರ್ಪಡಿಸಲಾಗಿತ್ತು.ಸಮುದಾಯ ತಂಡದವರ ಕ್ರಾಂತಿ ಗೀತೆಯೊಂದಿಗೆ ಸಭೆ ಆರಂಭವಾಯಿತು.ಕಾ| ಎಸ್. ಸವರಿದಾಸ್ ಸ್ವಾಗತಿಸಿದರು. ಕಾ।ಎಸ್.ಸೂರ್ಯನಾರಾಯಣ ರಾವ್ ಅಧ್ಯಕ್ಷತೆ ವಹಿಸಿದ್ದರು. ಜನತಾ ಪಕ್ಷದ ಪನ್ನಾಲಾಲ್‌ವೇದಿಕೆಯ ಮೇಲಿದ್ದರು.

ದಕ್ಷಿಣ ಆಫ್ರಿಕಾದ ಚಿನ್ನದ ಗಣಿ ಕಾರ್ಮಿಕರ ಮುಖಂಡ,COSATU ನಾಯಕ ಕಾ| ಜಸ್ಟಿಸ್ ಹಲಾಲೆ ತಮ್ಮ ಭಾಷಣದಲ್ಲಿ ಕಳೆದ ಮೂರು ಶತಮಾನಗಳಿಂದ ನಾವು ದಕ್ಷಿಣ ಆಫ್ರಿಕಾದಲ್ಲಿ ಅಲ್ಪಸಂಖ್ಯಾತ ಬಿಳಿಯರ ಆಡಳಿತದ ವಿರುದ್ಧ ನಿರಂತರವಾಗಿ ಹೋರಾಡುತ್ತಿದ್ದೇವೆ. ಬಹು ಸಂಖ್ಯಾತ ಆಫ್ರಿಕಾದ ಜನತೆ ಎದುರಿಸುತ್ತಿರುವ ದಬ್ಬಾಳಿಕೆಯ ಬಗ್ಗೆ ಹೇಳಿದರಲ್ಲದೆ 1985ರಲ್ಲಿ 33 ಕಾರ್ಮಿಕ ಸಂಘಗಳನ್ನೊಳಗೊಂಡ ಕಾಂಗ್ರೆಸ್ ಆಫ್ ಸೌತ್ ಆಫ್ರಿಕನ್ ಟ್ರೇಡ್‌ಯೂನಿಯನ್ಸ್‌ನ್ನು (COSATU) ರಚಿಸಿಕೊಂಡು ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದಲ್ಲಿ ಕಾರ್ಮಿಕ ವರ್ಗ ಮುಂಚೂಣಿಯಲ್ಲಿದ್ದು ಹೋರಾಡುತ್ತಿದೆ ಎಂದರು. ಜಗತ್ತಿನಾದ್ಯಂತ ಕಾರ್ಮಿಕ ವರ್ಗದೊಂದಿಗೆ ಸೌಹಾರ್ದತೆಯನ್ನು ಬೆಳೆಸುವುದು COSATU ಉದ್ದೇಶವಾಗಿದೆ ಎಂದರು.

ಇಲ್ಲಿನ ಚಿನ್ನದ ಗಣಿಯನ್ನು ವೀಕ್ಷಿಸಿದ ಅವರು ಇಲ್ಲಿ ಗಣಿಯೊಳಗೆ ಸುರಕ್ಷಿತತೆ ದಕ್ಷಿಣ ಆಫ್ರಿಕಾದ ಗಣಿಗಳಿಗಿಂತ ಎಷ್ಟೋ ಪಟ್ಟು ಚೆನ್ನಾಗಿದೆ ಎಂದರು. ದಕ್ಷಿಣ ಆಫ್ರಿಕಾದ ಗೋಲ್ಡ್ ಮೈನ್ಸ್ ಕಾರ್ಮಿಕರ ಪ್ರತಿನಿಧಿಯಾಗಿ ಅವರ ಕಷ್ಟಗಳನ್ನು ಇಲ್ಲಿಯ ಚಿನ್ನದ ಗಣಿ ಕಾರ್ಮಿಕರಲ್ಲಿ ಹೇಳಿಕೊಂಡಿದ್ದೇನೆಂಬ ಸಮಾಧಾನವಿದೆ ಎಂದರು.

ನಂತರ ಸ್ಥಳೀಯ ಜನತಾ ಪಕ್ಷದ ನಾಯಕ, ಕರ್ನಾಟಕ ಆಗ್ರೊ ಇಂಡಸ್ಟ್ರೀಸ್‌ನ ಅಧ್ಯಕ್ಷ ಶ್ರೀ ಪನ್ನಾಲಾಲ್ ಮಾತಾಡಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ದಕ್ಷಿಣ ಆಫ್ರಿಕಾದ ಜನತೆಯೊಂದಿಗೆ ನಾವು ಸೌಹಾರ್ದತೆಯನ್ನು ಹೊಂದಿದ್ದೇವೆ. ಅವರ ಹೋರಾಟ ಜಯವಾಗಲಿ ಎಂದರು. ಕೊನೆಯಲ್ಲಿ ಬಿ.ಇ.ಎಂ.ಎಲ್‌ಕಾರ್ಮಿಕ ಸಂಘದ ಜಂಟೀ ಕಾರ್ಯದರ್ಶಿ ಕಾ| ಕುಪ್ಪುಸ್ವಾಮಿ ವಂದನಾರ್ಪಣೆ ಮಾಡಿದರು. ○

ರಾಜಸ್ತಾನ ಪಕ್ಷ ಹಾಗೂ ರೈತರ ಮೇಲೆ ಗೋಲಿಬಾರ್

ರಾಜಸ್ತಾನದ ಸಿಕಾರ್ ನಗರದ ವಕೀಲರ ಪ್ರಜಾಸತ್ತಾತ್ಮಕ ಬೇಡಿಕೆಗಳಿಗೆ ಬೆಂಬಲಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ನಡೆಸಿದ ಪ್ರದರ್ಶನದ ಮೇಲೆ ಪೋಲೀಸರು ದಾಳಿ ನಡೆಸಲಾಗಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ರೈತ ಸಂಘದ ಕಛೇರಿಗಳನ್ನು ವಶಪಡಿಸಿಕೊಳ್ಳುವುದರ ಮೂಲಕ ರಾಜಸ್ತಾನದ ಕಾಂಗ್ರೆಸ್ (ಐ) ಸರ್ಕಾರ ಕ್ರೂರ ರೀತಿಯಲ್ಲಿ ದಬ್ಬಾಳಿಕೆ ನಡೆಸಿದೆ. ಇಂತಹ ಕ್ರಮವನ್ನು ವಿರೋಧಿಸಿ ಪಕ್ಷ ಹಾಗೂ ರೈತ ಸಂಘ ಜಂಟಿಯಾಗಿ ಮೇ 22 ರಂದು ಪ್ರತಿಭಟನಾ ಮೆರವಣಿಗೆ ನಡೆಸಿದರು. ಶಾಂತಿಯುತ ಪ್ರದರ್ಶನದ ಮೇಲೆ ಪೋಲೀಸರು ಮತ್ತೊಮ್ಮೆ ಲಾಠಿ ಚಾರ್ಜ್ ಗೋಲಿಬಾರ್ ನಡೆಸಿದರ ಪರಿಣಾಮವಾಗಿ ಸ್ಥಳದಲ್ಲೇ ಒಬ್ಬ ವಿದ್ಯಾರ್ಥಿ ಮೃತಪಟ್ಟು ಪಕ್ಷದ ಶಾಸಕರಾದ ಕಾ. ಸೋಪಾಟ್‌ಸಿಂಗ್ ರವರನ್ನೊಳಗೊಂಡು ನೂರಾರು ಕಾರ್ಯಕರ್ತರಿಗೆ ಗಾಯವಾಯಿತು. 130 ಮಂದಿ ಕಾರ್ಯಕರ್ತರನ್ನು ಬಂಧಿಸಲಾಯಿತು. ಗೋಲಿಬಾರ್‌ನಲ್ಲಿ ಮಡಿದ ವಿದ್ಯಾರ್ಥಿ ಕುಟುಂಬಕ್ಕೆ ಪರಿಹಾರ, ದಸ್ತಗಿರಿ ಮಾಡಿರುವ ನಾಯಕರ ಬಿಡುಗಡೆ, ಘಟನೆ ಕುರಿತು ತನಿಖೆಗೆ ಒತ್ತಾಯಿಸಿ 3ನೇ ಬಾರಿಗೆ ನಡೆದ ಬೃಹತ್ ರ್‍ಯಾಲಿಯಲ್ಲಿ ವಿದ್ಯಾರ್ಥಿಯ ತಾಯಿನ್ನೊಳಗೊಂಡು ಸಹಸ್ರಾರು ಜನತೆ ಪಾಲ್ಗೊಂಡಿರು.

ಪಕ್ಷದ ಪಾಲಿಟ್ ಬ್ಯೂರೋ ಹೇಳಿಕೆಯನ್ನು ನೀಡಿ ಪಕ್ಷದ ಕಛೇರಿ ವಶಪಡಿಸಿಕೊಂಡಿರುವ ಕ್ರಮವನ್ನು ತೀವ್ರವಾಗಿ ಖಂಡಿಸಿ ದಸ್ತಗಿರಿ ಮಾಡಿರುವ ನಾಯಕರನ್ನು ಕೂಡಲೇ ಬಿಡುಗಡೆ ಮಾಡಿ ಘಟನೆ ಕುರಿತು ತನಿಖೆ ನಡೆಸಲು ರಾಜಸ್ತಾನದ ಸರ್ಕಾರವನ್ನು ಒತ್ತಾಯಿಸಿದೆ.

ಶ್ರೀಲಂಕಾ ಸಮಸ್ಯೆ - ಅದರ ಹಿನ್ನೆಲೆ ಏನು ?

ಹೊಸದಾಗಿ ಸ್ವಾತಂತ್ರ್ಯ ಗಳಿಸಿರುವ ರಾಷ್ಟ್ರಗಳ ಬಂಡವಾಳಶಾಹಿ ಭೂಮಾಲಕ ಸರಕಾರಗಳು ತಮ್ಮ ದೇಶ ಹಾಗೂ ಜನತೆಯ ಐಕ್ಯತೆಯನ್ನು ಕಾಪಾಡಿಕೊಳ್ಳುವಲ್ಲಿ ಹೇಗೆ ವಿಫಲವಾಗುತ್ತಿವೆ ಎನ್ನುವುದಕ್ಕೆ ಶ್ರೀಲಂಕಾದಲ್ಲಿ ನಡೆಯುತ್ತಿರುವ ಘಟನೆಗಳೇ ದೃಷ್ಟಾಂತ. ತಮ್ಮ ದೇಶಗಳಲ್ಲಿ ಪಾಳೆಯಗಾರಿ ಪದ್ಧತಿಯನ್ನು ತೊಡೆದು ಹಾಕದೆ ಪಾಳೆಯಗಾರಿ ಶಕ್ತಿಗಳೊಡನೆ ರಾಜೀಮಾಡಿಕೊಂಡು ಬಂಡವಾಳಶಾಹಿ ವ್ಯವಸ್ಥೆಯನ್ನು ಕಟ್ಟುವ ಇಂತಹ ಸರ್ಕಾರಗಳು ವಿಭಜಕ ಮತ್ತು ಪ್ರತ್ಯೇಕವಾದಿ ಶಕ್ತಿಗಳನ್ನು ಸಾಕಷ್ಟು ಬೆಳೆಯಲು ಅವಕಾಶ ಮಾಡಿಕೊಡುವ ಮೂಲಕ ತಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ತಾವೇ ಅಪಾಯ ತಂದೊಡ್ಡಿವೆ. ರಾಷ್ಟ್ರದಲ್ಲಿರುವ ಅಲ್ಪಸಂಖ್ಯಾತ ಜನವಿಭಾಗಗಳ ಸಮಸ್ಯೆಯನ್ನು ಬಗೆಹರಿಸಲು ಸೋತಿರುವ ಈ ಸರ್ಕಾರಗಳು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿವೆ.ಜಗತ್ತಿನ ಎಲ್ಲೆಡೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಲು ಉತ್ಸುಕರಾಗಿರುವ ಸಾಮ್ರಾಜ್ಯಶಾಹಿಗಳು ಈ ಪರಿಸ್ಥಿತಿಯ ದುರ್ಲಾಭ ಪಡೆದು ವಿಭಜಕ ಶಕ್ತಿಗಳಿಗೆ ಉತ್ತೇಜನ ನೀಡುವ ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದನ್ನೂ ಕಾಣಬಹುದು.

ಜನಾಂಗೀಯ ಸಮಸ್ಯೆ ?

ಶ್ರೀಲಂಕಾದ ಜನಾಂಗೀಯ ಸಮಸ್ಯೆಯೆಂದು ಕರೆಯಲಾಗಿರುವ ತಮಿಳರ ಸಮಸ್ಯೆಯೆಂದರೆ ವಾಸ್ತವಿಕವಾಗಿ ಅಲ್ಲಿನ ಅಲ್ಪಸಂಖ್ಯಾತ ಭಾಷಿಕರ ದೇಶೀ ಸಮಸ್ಯೆ.ಇದರ ಆಶೋತ್ತರಗಳನ್ನು, ನ್ಯಾಯಬದ್ಧ ಬೇಡಿಕೆಗಳನ್ನು ಅಲ್ಲಿನ ಆಳುವ ವರ್ಗಗಳು ಕಡೆಗಣಿಸಿವೆ.

ಬಹುಸಂಖ್ಯಾತರಾದ ಸಿಂಹಳೀಯರು ಶ್ರೀಲಂಕೆ ತಮಗೆ ಮಾತ್ರ ಸೇರಿದ್ದೆಂದೂ ತಮಿಳರಿಗೆ ಅಲ್ಲಿ ಸ್ಥಾನವಿಲ್ಲವೆಂದೂ ಭಾವಿಸಿರುವುದೇ ಶ್ರೀಲಂಕಾ ಸಮಸ್ಯೆಗೆ ಮೂಲ ಕಾರಣ. ಮೂರು ಮಿಲಿಯ ಶ್ರೀಲಂಕಾ ತಮಿಳರಲ್ಲದೆ ಕ್ಯಾಂಡಿ ಬೆಟ್ಟಗಳ ಚಹಾ ತೋಟಗಳಲ್ಲಿ ದುಡಿಯುವ ಹೆಚ್ಚಿನ ಕಾರ್ಮಿಕರು ತಮಿಳರು ಮತ್ತು ಭಾರತೀಯ ಮೂಲದವರು.ಬ್ರಿಟಿಷ ಚಹಾ ತೋಟಗಳ ಮಾಲೀಕರು ಈ ಕಾರ್ಮಿಕರ ತಾತ ಮುತ್ತಾತಂದಿರನ್ನು ಹಿಂದಿನ ಮದ್ರಾಸ್ ಪ್ರಾಂತದಿಂದ ಜೀತದಾಳುಗಳಾಗಿ ಶ್ರೀಲಂಕೆಗೆ ಒಯ್ದಿದ್ದರು. ಕ್ಯಾಂಡಿ ಬೆಟ್ಟಗಳ ತಪ್ಪಲಲ್ಲಿ ಕಾಡು ಕಡಿದು ಸಣ್ಣಪುಟ್ಟಹೊಲಗಳಲ್ಲಿ ಸಾಗುವಳಿ ನಡೆಸುತ್ತಿದ್ದ ಸಿಂಹಳೀಯರಿಗೆ ಈ ತಮಿಳರ ಮೇಲೆ ಅಸಮಾಧಾನವುಂಟಾದುದು ಸಹಜವೇ. ಯಾಕೆಂದರೆ ಬ್ರಿಟಿಷರು ಈ ಹೊಲಗದ್ದೆಗಳನ್ನು ಕಬಳಿಸಿ ಅಲ್ಲೇ ತಮ್ಮ ಚಹಾ ತೋಟಗಳನ್ನು ಬೆಳೆಸಿದ್ದುದು. ಈ ಶತಮಾನದ ಆರಂಭದ ದಶಕದಲ್ಲಿ ಜೀತದಾಳು ಪದ್ಧತಿ ಕೊನೆಗೊಂಡಾಗ ಈ ತಮಿಳು ಕಾರ್ಮಿಕರು ಸ್ವತಂತ್ರರಾದರೂ ಅವರಿಗೆ ಶ್ರೀಲಂಕೆಯ ಪೌರತ್ವಮಾತ್ರ ದೊರೆಯಲಿಲ್ಲ. ಈ ಕಾರ್ಮಿಕರಿಗೆ ಶ್ರೀಲಂಕಾ ಪೌರತ್ವನೀಡಬೇಕೆಂಬ ಬೇಡಿಕೆಗಳಿಗಾಗಿ ಒತ್ತಾಯಿಸಿದ್ದು ಅಲ್ಲಿನ ಕಮ್ಯುನಿಸ್ಟ ಪಕ್ಷ ಮಾತ್ರ. ಆದರೂ ಈ ತಮಿಳರ ಪೌರತ್ವದ ಸಮಸ್ಯೆ ಬಗೆಹರಿಯಲೇ ಇಲ್ಲ. ಅರವತ್ತರ ದಶಕದಲ್ಲಿ ಲಾಲ್ ಬಹಾದೂರ್ ಶಾಸ್ತ್ರಿ-ಸಿರಿಯಾ ಮೋಬಂಡಾರ ನಾಯಕ ಅವರ ಒಪ್ಪಂದದಂತೆ ಪೌರತ್ವರಹಿತವಾದ ಹತ್ತು ಲಕ್ಷ ತಮಿಳರಲ್ಲಿ 5.25ಲಕ್ಷ ಜನರನ್ನು ಭಾರತ ವಾಪಾಸು ತೆಗೆದುಕೊಂಡಿತು. ಉಳಿದ ಮೂರು ಲಕ್ಷಕ್ಕೂ ಮಿಕ್ಕಿದ ತಮಿಳರಿಗೆ ಶ್ರೀಲಂಕಾ ಪೌರತ್ವ ನೀಡಲಾಗುವುದೆಂದೂ ಒಪ್ಪಿಕೊಳ್ಳಲಾಗಿತ್ತು. ಆದರೆ ಈ ಒಪ್ಪಂದವನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆತರಲಾಗಿಲ್ಲ.ಹಾಗಾಗಿ ಪೌರತ್ವರಹಿತ ತಮಿಳರ ಸ್ಥಿತಿ ತ್ರಿಶಂಕುವಿನಂತಾಗಿದೆ. ಇವರಲ್ಲದೆ ಕೈಗಾರಿಕೆ, ಉದ್ದಿಮೆ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ತೊಡಗಿರುವ ಸುಮಾರು ಎರಡು ಲಕ್ಷ ಭಾರತೀಯರು ಕೊಲಂಬೋ ಮತ್ತಿತರ ನಗರಗಳಲ್ಲಿದ್ದಾರೆ. ಇದರಲ್ಲಿ ಮುಖ್ಯ ಸಮಸ್ಯೆ ಮೊದಲೇ ಹೇಳಿದ ಮೂವತ್ತು ಲಕ್ಷ ಶ್ರೀಲಂಕಾ ತಮಿಳರಿಗೆ ಸಂಬಂಧಿಸಿದೆ.

ಐಕ್ಯ ಶ್ರೀಲಂಕಾ

ಶ್ರೀಲಂಕೆ ರಾಜಕೀಯವಾಗಿಯೂ ಭೌಗೋಳಿಕವಾಗಿಯೂ ಒಂದಾಗಿ ಐಕ್ಯವಾಗಿದ್ದ ದೇಶ. ಇದನ್ನು ತಮಿಳರೂ ಸಿಂಹಳೀಯರೂ ಒಪ್ಪಿಕೊಂಡಿದ್ದರು. ಶ್ರೀಲಂಕೆಯನ್ನು ಫೆಡರಲ್ ರಾಷ್ಟ್ರವಾಗಿ ಮಾರ್ಪಡಿಸುವ ಪ್ರಯತ್ನಗಳನ್ನೂ ಅಲ್ಲಿನ ತಮಿಳರೇ ಒಂದು ಕಾಲದಲ್ಲಿ ವಿರೋಧಿಸಿದ್ದರು. ಮುಂದೆ ಶ್ರೀಲಂಕಾದ ಪ್ರಧಾನಿಯಾದ ಎಸ್. ಡಬ್ಲ್ಯು.ಆರ್.ಡಿ. ಬಂಡಾರನಾಯಕೆ ಅವರು 1925ರಲ್ಲಿ ಫೆಡರಲ್ ರಾಷ್ಟ್ರದ ಪ್ರಸ್ತಾಪವನ್ನು ಮುಂದೊಡ್ಡಿದ್ದಾಗ ತಮಿಳರೂ ಬಯಲು ಪ್ರದೇಶದ ಸಿಂಹಳೀಯರೂ ಸೇರಿ ಅದನ್ನು ಪ್ರಬಲವಾಗಿ ವಿರೋಧಿಸಿದ್ದರು. ಚಹಾ ಎಸ್ಟೇಟುಗಳ ಕಾರ್ಮಿಕರಾಗಿದ್ದ ತಮಿಳರಿಗೆ ಪೌರತ್ವದ ಹಕ್ಕುಗಳು ನಿರಾಕರಿಸಲ್ಪಟ್ಟ ಹಿನ್ನೆಲೆಯಲ್ಲಿ ಫೆಡರಲ್ಪಕ್ಷದ ಸ್ಥಾಪನೆಯಾದಾಗಲೂ ಸಹ ತಮಿಳರು ಈ ಪಕ್ಷವನ್ನು 1952ರ ಚುನಾವಣೆಯಲ್ಲಿ ಸೋಲಿಸಿದ್ದರು. ಫೆಡರಲ್ವಾದ ತಮಿಳರಿಗೆ ಬೇಕಾಗಿಯೇ ಇರಲಿಲ್ಲ. ಶ್ರೀಲಂಕಾ ಫ್ರೀಡಮ್ ಪಾರ್ಟಿ ಮತ್ತು ಯುನೈಟೆಡ್ ನ್ಯಾಶನಲ್ ಪಾರ್ಟಿಗಳು 1956ರಲ್ಲಿ ಸಿಂಹಳೀ ಭಾಷೆಯೊಂದೇ ಅಧಿಕೃತ ಭಾಷೆಯೆಂಬ ಶಾಸನವನ್ನು ಅಂಗೀಕರಿಸಿದಾಗ ಮಾತ್ರ ತಮಿಳರು ಫೆಡರಲ್ವಾದದ ಕಡೆಗೆ ಸೆಳೆಯಲ್ಪಟ್ಟರು. ಆದರೂ ಅವರು ಪ್ರತ್ಯೇಕ ತಮಿಳು ರಾಜ್ಯದ ಬೇಡಿಕೆಗೆ ಬಲಿಬಿದ್ದಿರಲಿಲ್ಲ. 1956 ಮತ್ತು 1958ರ ದಂಗೆಗಳು, ವಿಶ್ವವಿದ್ಯಾಲಯದ ಪ್ರವೇಶಕ್ಕೆ ಸಂಬಂಧಿಸಿದಂತೆ 1970ರ ದಶಕದಲ್ಲಿ ಉಂಟಾದ ಬಿಕ್ಕಟ್ಟು ಮತ್ತು ಅಲ್ಪಸಂಖ್ಯಾತರಿಗೆ ಕೊಡಲಾಗಿದ್ದ ಸವಲತ್ತುಗಳನ್ನು ರದ್ದುಪಡಿಸಿದ ಹೊಸ ಸಂವಿಧಾನ 1972ರಲ್ಲಿ ಅಂಗೀಕರಿಸಲ್ಪಟ್ಟಾಗಲೂ ಸಹ ಪ್ರತ್ಯೇಕವಾದದ ಬೇಡಿಕೆ ಬಂದಿರಲಿಲ್ಲ. ಅದು ಬಂದದ್ದು 1975ರಲ್ಲಿ; ತಮಿಳು ಯುನೈಟೆಡ್ ಲಿಬರೇಷನ್ ಫ್ರಂಟ್(ಟಿ.ಯು.ಎಲ್.ಎಫ್) ಸ್ಥಾಪನೆಯಾದದ್ದು ಅದೇ ವರ್ಷ.ಹಾಗಿದ್ದರೂ ತಮಿಳರು ಟಿ.ಯುು.ಎಲ್.ಎಫ್.ಗೆ ಮತನೀಡುತ್ತಿದ್ದುದು ಪ್ರತ್ಯೇಕವಾದದ ದೃಷ್ಟಿಯಿಂದ ಅಲ್ಲ; ತಮಿಳರ ಹಕ್ಕುಗಳನ್ನುಗಳಿಸಿಕೊಳ್ಳಲು ಈ ಪಕ್ಷ ಹೋರಾಡುತ್ತಿದೆ ಎಂಬುವುದಕೋಸ್ಕರ ಮಾತ್ರ.

ತಮಿಳು ಪ್ರದೇಶಗಳ ವಿರುದ್ಧ ತಾರತಮ್ಯ

ಶ್ರೀಲಂಕೆಯ ತಮಿಳು ಪ್ರದೇಶದ ಜನ ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ದೃಷ್ಟಿಗಳಿಂದ ಪದೇ ಪದೇ ತುಳಿತಕ್ಕೆ ಒಳಗಾಗಿದ್ದಾರೆ. ಜಾಫ್ನಾ

ಶ್ರೀಲಂಕಾದ ತಮಿಳು ಸಮಸ್ಯೆ ಭಾರತದ ಜನತೆಯನ್ನು ತಲ್ಲಣಗೊಳಿಸುತ್ತಿದೆ. ಈ ಸಮಸ್ಯೆಯ ಮೂಲವೇನು? ವಿವರಿಸುತ್ತಾರೆ. ಕಾಂ. ಎ.ಎಸ್. ಆಚಾರ್ಯ.

ಪ್ರದೇಶಕ್ಕೆ 1982ರಲ್ಲಿ ವಿಕೇಂದ್ರಿಕರಣ ಬಜೆಟ್‌ನಲ್ಲಿ ದೊರೆತದ್ದು ಕೇವಲ 27 ಕೋಟಿ ರೂಪಾಯಿ. 1981ರ ಕೇಂದ್ರ ಮುಖಂಡ ಪತ್ರದಲ್ಲಿ ಒಟ್ಟು ವೆಚ್ಚ ರೂ. 900 ಕೋಟಿಯಾಗಿದ್ದರೆ ಜಾಪ್ನಾಕ್ಕೆ ದೊರೆತದ್ದು ಕೇವಲ ಶೇ. 2.6 ರಷ್ಟು ಅಂದರೆ ರೂ. 26ಕೋಟಿ ಮಾತ್ರ. ಅದೇ ವರ್ಷ ಕೇಂದ್ರ ಸರಕಾರ ಮಾಡಿದ ತಲಾ ವೆಚ್ಚದ ಸರಾಸರಿ ರೂ. 656 ಆಗಿದ್ದರೆ ಜಾಪ್ನಾದಲ್ಲಿ ಈ ಸಲ ಕೇವಲ ರೂ. 313 ಇದಲ್ಲದೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ತಮಿಳರ ವಿರುದ್ಧ ಪಕ್ಷಪಾತ ನಡೆಸಲಾಗಿದೆ. 1978 ರಲ್ಲಿ ಅಂಗೀಕರಿಸಲಾದ ಹೊಸ ಸಂವಿಧಾನದ ಪ್ರಕಾರ ಕೇಂದ್ರಿಕೃತ ರಾಜಕೀಯ ವ್ಯವಸ್ಥೆಯನ್ನು ಜಾರಿಗೆ ತರಲಾಯಿತಲ್ಲದೆ ಅಧ್ಯಕ್ಷರ ಕೈಗೆ ಎಲ್ಲ ಅಧಿಕಾರಗಳನ್ನೂ ಒಪ್ಪಿಸಲಾಗಿದೆ. 1978ರಲ್ಲಿ ಆಯ್ಕೆಯಾಗಿದ್ದ ಪಾರ್ಲಿಮೆಂಟಿನ ಅವಧಿಯನ್ನು ಅಭಿಮತ ಸಂಗ್ರಹದ ಮೂಲಕ 1989 ರವರೆಗೂ ವಿಸ್ತರಿಸಲಾಯಿತು. ಪ್ರತ್ಯೇಕತಾವಾದವನ್ನು ನಿಷೇಧಿಸುವ ನೆಪದಲ್ಲಿ ಟಿ.ಯು.ಎಲ್.ಎಫ್. ನ ಪ್ರತಿನಿಧಿಗಳಿಗೆ ಪಾರ್ಲಿಮೆಂಟಿನಲ್ಲಿ ಪಾಲುಗೊಳ್ಳುವ ಹಕ್ಕನ್ನು ಅಲ್ಲಗೆಳೆಯಲಾಯಿತು. ಈ ದೇಶದಲ್ಲಿ 1983ರಿಂದಲೂ ವಿಷಮ ಪರಿಸ್ಥಿತಿ ಜಾರಿಗೊಳಿಸಲಾಗಿದೆಯಲ್ಲದೆ ಇದರಿಂದ ಅತೀವ ದೌರ್ಜನ್ಯಕ್ಕೊಳಗಾದವರೂ ತಮಿಳರೇ.

ಸ್ವಾಯತ್ತತೆಯ ಬೇಡಿಕೆ

ಆಗಸ್ಟ್ 1956ರಲ್ಲಿ ತ್ರಿಂಕಾಮಲಿಯಲ್ಲಿ ಸೇರಿದ್ದ ಫೆಡರಲ್ ಪಾರ್ಟಿಯ ಸಮಾವೇಶವು ತಮಿಳು ಪ್ರದೇಶಗಳ ಸ್ವಾಯತ್ತತೆಗಾಗಿ ನಾಲ್ಕು ಅಂಶಗಳ ಬೇಡಿಕೆಯನ್ನು ಸಲ್ಲಿಸಿತ್ತು. ಇದರಲ್ಲಿ ಪ್ರತ್ಯೇಕವಾದದ ಛಾಯೆಯೂ ಇರಲಿಲ್ಲ: ಶ್ರೀಲಂಕಾ ಸಂವಿಧಾನದ ಚೌಕಟ್ಟಿನೊಳಗೇ ತಮಿಳು ಭಾಷಾ ಪ್ರದೇಶಗಳಿಗೆ ಸ್ವಾಯತ್ತತೆ, ಶ್ರೀಲಂಕೆಯಲ್ಲೇ ಖಾಯಂ ಆಗಿ ನೆಲೆಸಿರುವವರಿಗೆ ಅಲ್ಲಿನ ಪೌರತ್ವ ಹಕ್ಕುಗಳು, ಸರ್ಕಾರದ ಮಟ್ಟದಲ್ಲಿ ತಮಿಳು ಭಾಷೆಗೆ ಸಿಂಹಳೀ ಭಾಷೆಗೆ ಸಮಾನವಾದ ಸ್ಥಾನಮಾನ ಹಾಗೂ ತಲೆ ತಲಾಂತರದಿಂದ ತಮಿಳರೇ ನೆಲೆಸಿರುವ ವಲಸೆಗಾಗಿ ಬಳಸಿಕೊಳ್ಳದಿರುವುದು ಇದೇ ಆ ಬೇಡಿಕೆಗಳು. ಭಂಡಾರ ನಾಯಕೆ ಮತ್ತು ಚಲವನಾಯಗಂ ಅವರ ನಡುವೆ 1957 ರಲ್ಲಿ ಆಗಿದ್ದ ಒಪ್ಪಂದಕ್ಕೆ ಈ ಬೇಡಿಕೆಗಳೇ ಆಧಾರವಾಗಿದ್ದವು. ಆದರೆ ಒಪ್ಪಂದ ಬಹುಸಂಖ್ಯಾತ ಸಿಂಹಳೀಯರ ಒತ್ತಡದಿಂದಾಗಿ ಕುಸಿದು ಬಿತ್ತು. ತಮಿಳು ಪ್ರದೇಶಗಳಿಗೆ ಸಿಂಹಳೀಯರ ವಲಸೆ ಭಾರಿ ಪ್ರಮಾಣದಲ್ಲಿ ನಡೆಯಲಾರಂಭಿಸಿತು. 1965 ರಲ್ಲಿ ನಡೆದ ಸೇನಾನಾಯಕೆ-ಚಲವನಾಯಗಂ ಒಪ್ಪಂದ ಈ ಸರ್ಕಾರೀ ಪ್ರೇರಿತ ವಲಸೆಯ ವಿರುದ್ಧ ನಿರ್ದಿಷ್ಟವಾಗಿಹೇಳಿದ್ದರೂ ಅದನ್ನೂ ಉಲ್ಲಂಘಿಸಲಾಯಿತು. ಜಯವರ್ಧನೆ ಇದೀಗ ಎರಡುವರೆ ಲಕ್ಷ ಸಿಂಹಳೀಯರನ್ನು ಉತ್ತರ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ನೆಲೆಗೊಳಿಸಿ ಅವರಿಗೆ ಶಸ್ತ್ರಗಳನ್ನೂ ನೀಡಿದ್ದಾರೆ. ಎಲ್ಲ ಹಿಂದುಳಿದ ರಾಷ್ಟ್ರಗಳ ಆಳುವ ವರ್ಗಗಳಂತೆ ಶ್ರೀಲಂಕಾ ಸರ್ಕಾರವೂ ಸಿಂಹಳೀಯರ ಎಲ್ಲ ಕಾರ್ಪಣ್ಯ ಮತ್ತು ಬಡತನಗಳಿಗೆ ತಮಿಳು ಅಲ್ಪ ಸಂಖ್ಯಾತರೇ ಕಾರಣವೆಂಬ ವ್ಯವಸ್ಥಿತ ಪ್ರಚಾರ ನಡೆಸಿ ಸಿಂಹಳೀಯರನ್ನು ರೊಚ್ಚಿಗೆಬ್ಬಿಸಿದೆ. 1983ರಲ್ಲಿ ನಡೆದ ಭೀಕರ ತಮಿಳು ವಿರೋಧಿ ಗಲಭೆಗಳಿಗೆ ಇದೇ ಪ್ರೇರೇಪಣೆ.

ಒಂದು ಕಾಲದಲ್ಲಿ ಫೆಡರಲ್ ಸ್ವರೂಪದ ವ್ಯವಸ್ಥೆಯನ್ನು ತಿರಸ್ಕರಿಸಿ ಶ್ರೀಲಂಕೆಯ ಐಕ್ಯತೆಯಲ್ಲಿ ವಿಶ್ವಾಸವಿರಿಸಿದ್ದ ತಮಿಳು ಜನ ಇದೀಗ ಪ್ರತ್ಯೇಕವಾದಿ ಬೇಡಿಕೆಗಾಗಿ ಹೋರಾಡುತ್ತಿರುವುದಕ್ಕೆ ಈ ಎಲ್ಲ ಹಿನ್ನೆಲೆಯಿದೆ. ಆದರೂ ಪ್ರತ್ಯೇಕವಾದಿ ಶ್ರೀಲಂಕಾ ತಮಿಳರ ಹಿತಾಸಕ್ತಿಗೆ ವಿರುದ್ಧವಾಗಿದೆಯಲ್ಲದೆ ತಮಿಳು ಪ್ರದೇಶಗಳ ಸ್ವಾಯತ್ತತೆಯ ಬೇಡಿಕೆಗೂ ಹಾನಿಯುಂಟು ಮಾಡಲಿದೆ. ಸ್ವಾಯತ್ತತೆಯ ಬೇಡಿಯನ್ನು ಇನ್ನೂ ಕಡೆಗಣಿಸುವುದು ಶ್ರೀಲಂಕೆಯ ಪಾಲಿಗೆ ತೀರಾ ಅಪಾಯಕಾರಿ. ★

ತಮಿಳರ ತೀವ್ರಗಾಮಿ ಸಂಘಟನೆಗಳು

ತಮಿಳರ ವಿರುದ್ಧ ಶ್ರೀಲಂಕಾ ಸರ್ಕಾರದ ಭಯೋತ್ಪಾದಕ ಕೃತ್ಯಗಳು ತಮಿಳರಲ್ಲಿ ಹಲವಾರು ಸಮರಶೀಲ ಅಥವಾ ತೀವ್ರಗಾಮಿ ಗುಂಪುಗಳನ್ನು ಹುಟ್ಟುಹಾಕಿವೆ. ಇವುಗಳಲ್ಲಿ ತಮಿಳು ಈಳಂ ವಿಮೋಚನಾ ರಂಗ (ಟೆಲೋ) ಈಳಂ ಕ್ರಾಂತಿಕಾರೀ ವಿದ್ಯಾರ್ಥಿ ಸಂಘಟನೆ (ಈರೋಸ್), ಈಳಂ ಜನತಾ ಕ್ರಾಂತಿಕಾರೀ ವಿಮೋಚನಾ ರಂಗ (ಇ.ಪಿ.ಆರ್.ಎಲ್.ಎಫ್.), ತಮಿಳು ಈಳಂನ ವಿಮೋಚನಾ ಹುಲಿಗಳು (ಎಲ್.ಟಿ.ಟಿ.ಇ.] ಮತ್ತು ತಮಿಳು ಈಳಂ ಜನತಾ ವಿಮೋಚನಾ ಸಂಘಟನೆ (ಪ್ಲೋಟ್) ಈ ಐದು ಮುಖ್ಯವಾದವು. ಹತ್ತು ಸಾವಿರಕ್ಕೂ ಹೆಚ್ಚು ಗೆರಿಲ್ಲಾಗಳು ಈ ಸಂಘಟನೆಗಳಲ್ಲಿದ್ದಾರೆ.

1970 ರಲ್ಲಿ ಉಚ್ಛ ಶಿಕ್ಷಣದಲ್ಲಿ ತಮಿಳರ ವಿರುದ್ಧ ಪಕ್ಷಪಾತದಿಂದಾಗಿ ಯುವಕರಲ್ಲಿ ತಲೆಯೆತ್ತಿದ ಸಮರಶೀಲತೆ 1974ರ ಜನವರಿಯಲ್ಲಿ ಜಾಫ್ನಾದಲ್ಲಿ ಜಾಗತಿಕ ತಮಿಳು ಸಂಶೋಧನಾ ಸಮ್ಮೇಳನಕ್ಕೆ ಬಂದಿದ್ದವರ ಮೇಲೆ ಅನಾವಶ್ಯಕ ಲಾಠೀ ಪ್ರಹಾರದಿಂದ ಬಲಗೊಂಡಿತು. ಸರಕಾರ ಸ್ಥಾಪಿಸಿದ ಜಿಲ್ಲಾ ಅಭಿವೃದ್ಧಿ ಮಂಡಳಿಗಳು ಕೇವಲ ಒಂದು ಮೋಸವೆಂಬುದನ್ನು ಕಂಡುಕೊಂಡ ತಮಿಳು ಯುವಕರಿಗೆ1980-81ರ ಹೊತ್ತಿಗೆ ತಮಿಳು ಸಂಯುಕ್ತ ವಿಮೋಚನಾ ರಂಗದ [ಟಿ.ಯು.ಎಲ್ ಎಫ್.]ನಾಯಕತ್ವ ತಮಿಳರ ನ್ಯಾಯಬದ್ಧ ಹಕ್ಕು ಪಡೆಯುವಲ್ಲಿ ವಿಫಲವಾಗಿದ. ಸಶಸ್ತ್ರ ಹೋರಾಟದಿಂದ ಮಾತ್ರ ಇದು ಸಾಧ್ಯ ಎಂಬ ತೀರ್ಮಾನಕ್ಕೆ ಬಂದರು. ಪ್ರತ್ಯೇಕ ಸ್ವತಂತ್ರ

(5ನೇ ಪುಟ ನೋಡಿ)

ಶ್ರೀಲಂಕಾದ ಜನಸಂಖ್ಯೆ

ಸಿಂಹಳೀಯರು	1.10 ಕೋಟಿ
ಶ್ರೀಲಂಕಾ ತಮಿಳರು	18.7 ಲಕ್ಷ
ಶ್ರೀಲಂಕಾ ಮೂಲದವರು	10.6 ಲಕ್ಷ
ಭಾರತೀಯ ತಮಿಳರು	8.3 ಲಕ್ಷ
ಇತರರು	67 ಸಾವಿರ
ತಮಿಳರ ಜನಸಂಖ್ಯಾ ಪ್ರಮಾಣ	
ಉತ್ತರ ಪ್ರಾಂತ್ಯ	60%ಕ್ಕಿಂತ ಹೆಚ್ಚು
ಕ್ಯಾಂಡಿ ಪ್ರದೇಶ	60./. ಕ್ಕಿಂತ ಹೆಚ್ಚು
ಪೂರ್ವ ಪ್ರದೇಶ	30./. ದಿಂದ 60./.
(ಜಾಪ್ನಾ ಹಾಗೂ ಟ್ರಿಂಕೊಮಲ್ಯೆ ಸೇರಿ)	[1981ರ ಜನಗಣತಿ]

ಸಂಧಾನಗಳು ಮುರಿದು ಬಿದ್ದದ್ದೇಕೆ ?

ಜುಲೈ 23, 1983 ರಂದು ಶ್ರೀಲಂಕಾದಲ್ಲಿ ತಮಿಳರವಿರುದ್ಧ ನಡೆದ ವ್ಯಾಪಕ ಹಿಂಸಾಚಾರದ ನಂತರ ಆ ದೇಶದ ಜನಾಂಗ ಸಮಸ್ಯೆಯು ಸದ್ಯದ ಘಟ್ಟ ಆರಂಭವಾಯಿತ್ತೆನ್ನಬಹುದು. ಅಧ್ಯಕ್ಷ ಜಯವರ್ಧನೆಯವರ ಘೋರಣೆಗಳಿಂದಾಗಿ ಶ್ರೀಲಂಕಾದಲ್ಲಿ ಅಂತರ್ಯುದ್ಧವೆಂದೇ ಹೇಳಬಹುದಾದ ಪರಿಸ್ಥಿತಿ ಏರ್ಪಟ್ಟಿತ್ತು. ದಮನದಿಂದ ತಪ್ಪಿಸಿಕೊಳ್ಳಲು ಭಾರತಕ್ಕೆ ಬರುವ ನಿರಾಶ್ರಿತರ ಸಂಖ್ಯೆ ವೇಗದಿಂದ ಹೆಚ್ಚುತ್ತಿದ್ದುದೂ ಆತಂಕ ಉಂಟುಮಾಡಿತ್ತು.

ಈ ಸಂದರ್ಭದಲ್ಲಿ ಶ್ರೀಲಂಕಾದ ಸಮಗ್ರತೆಯ ಚೌಕಟ್ಟಿನೊಳಗೆ ಶ್ರೀಲಂಕಾ ಸರ್ಕಾರ ಹಾಗೂ ತಮಿಳು ಮುಖಂಡರನ್ನು ಮಾತುಕತೆಗೆ ತೊಡಗಿಸುವ ಭಾರತದ ಮಧ್ಯಸ್ಥಿಕೆ ಪ್ರಯತ್ನಗಳು ಪರಿಸ್ಥಿತಿಯನ್ನು ಬದಲಿಸಿದವು. ತಮಿಳು ಮಾತನಾಡುವ ಉತ್ತರ ಹಾಗೂ ಪೂರ್ವಪ್ರಾಂತ್ಯಗಳನ್ನು ಏಕಘಟಕವಾಗಿಪರಿಗಣಿಸಿ ಸ್ವಾಯತ್ತತೆ ನೀಡುವುದು ತಮಿಳರ ಮೂಲಭೂತ ಬೇಡಿಕೆ. ಇದಕ್ಕೆ ಪ್ರತಿಯಾಗಿ ಜಿಲ್ಲಾ ಅಭಿವೃದ್ಧಿ ಮಂಡಳಿಗಿಂತ ಮುಂದೆ ಹೋಗಲು ಅದುವರೆವಿಗೆ ಸಿದ್ಧವಿಲ್ಲದ ಜಯವರ್ಧನೆ ಸರ್ಕಾರ ನವಬಂಂರ್ 1983ರಲ್ಲಿ ಒಮ್ಮೆ, ಮತ್ತೊಮ್ಮೆ ಸೆಪ್ಟಂಬರ್ 1984ರಲ್ಲಿ ತನ್ನ ಪ್ರಸ್ತಾಪಗಳನ್ನು ಮಂಡಿಸಿತು. ಇವು ತಮಿಳರ ಆಶೋತ್ತರಗಳನ್ನು ಪೂರ್ಣವಾಗಿ ಈಡೇರಿಸದಿದ್ದರೂ ಈ ಬಗ್ಗೆ ಮಾತುಕತೆ ಇನ್ನೇನು ಆರಂಭವಾಗಬೇಕು ಎನ್ನುವಷ್ಟರಲ್ಲಿ ಎರಡು ಬಾರಿಯೂ ಶ್ರೀಲಂಕಾ ಸರ್ಕಾರ ತನ್ನ ಮಾತಿನಿಂದ ತಾನೇ ಹಿಂದೆ ಸರಿಯಿತು. ಮೊದಲನೆಯ ಬಾರಿ ಪ್ರಾದೇಶಿಕ ಮಂಡಳಿ ರಚನೆಯ ಪ್ರಸ್ತಾಪ ಭಾರತ ಹೇರಿದ ಪರಿಹಾರವೆಂದು ಸರ್ವಪಕ್ಷ ಸಮ್ಮೇಳನ ತಿರಸ್ಕರಿಸಿದ್ದು ಇದಕ್ಕೆ ಕಾರಣವೆನ್ನಲಾಯಿತು. ವಾಸ್ತವವಾಗಿ ಇದು ತನ್ನದೆ ಪ್ರಸ್ತಾಪ ಎಂದು ಮನವರಿಕೆ ಮಾಡಿಸಲು ಜಯವರ್ಧನೆಯವರು ಯಾವ ಹಂತದಲ್ಲೂ ಪ್ರಯತ್ನಿಸಲೇ ಇಲ್ಲ. ನಂತರ ಅಂತರ–ಜಿಲ್ಲಾ ಸಂಯೋಜಕ ಸಮಿತಿ ಹಾಗೂ ಎರಡನೇ ಸದನದ ರಚನೆಯ ಪ್ರಸ್ತಾಪಗಳನ್ನೂ ತಮಿಳು ಮುಖಂಡರು ಮಾತುಕತೆಗೆ ಸಿದ್ಧವಿಲ್ಲವೆಂಬ ಸುಳ್ಳು ನೆಪ ಹೂಡಿ ಕೈ ಬಿಡಲಾಯಿತು.

ಇದು ಜಯವರ್ಧನೆಯವರ ರಾಜಕೀಯ ಕುತಂತ್ರದ ಪರಮಾವಧಿಯಾಗಿತ್ತು. ಇವೆಲ್ಲಾ ಕೇವಲ ತಮಿಳರ ವಿರುದ್ಧ ಯುದ್ಧ ತಯಾರಿಗೆ ಸಮಯ ಪಡೆಯುವ ಪ್ರಯತ್ನವಷ್ಟೇ ಎಂಬ ಭಾವನೆ ಹರಡುವಂತಾಯಿತು.

ಮತ್ತೇ ಭಾರತದ ಪ್ರಯತ್ನದ,ಫಲವಾಗಿ ಭಾರತ ಮತ್ತು ಶ್ರೀಲಂಕಾದ ಸಂಧಾನ ಪರಿಣತರ ಸಭೆ, ನಂತರ ಭೂತಾನದ ತಿಂಪುವಿನಲ್ಲಿ ಶ್ರೀಲಂಕಾ ಸರ್ಕಾರ ಮತ್ತು ತಮಿಳು ಮುಖಂಡರ ನಡುವೆ ಮಾತುಕತೆ. ಈ ನಡುವೆ ಜಾಫ್ನಾ ಮತ್ತು ಟ್ರಿಂಕೋಮಲಿಯಲ್ಲಿ ಶ್ರೀಲಂಕಾ ಸರ್ಕಾರದ ಮಿಲಿಟರಿ ಕ್ರಮ ಮತ್ತೆ ಆರಂಭವಾಗಿದ್ದರೂ ತಮಿಳು ಜನರ ಸಮರಶೀಲ ಸಂಘಟನೆಗಳೂ ಆಗಸ್ಟ್ 1985ರಲ್ಲಿ ತಿಂಪುವಿನಲ್ಲಿ ನಡೆದ ಎರಡನೇ ಸುತ್ತಿನ ಮಾತುಕತೆಗಳಲ್ಲಿ ಭಾಗವಹಿಸಿದವು.

ಮಾತುಕತೆಗಳು ಮುಂದುವರಿದವು. ಜತೆಗೆ ತಮಿಳು ಜನತೆಯ ವಿರುದ್ಧ ಕ್ರೂರ ದಮನ ಕೂಡಾ. ಜುಲೈ 1986 ರಲ್ಲಿ ಕೋಲಂಬೋದಲ್ಲಿ ಟಿ.ಯು.ಎಲ್.ಎಫ್. ಮುಖಂಡರ ಜತೆ ಜಯವರ್ಧನೆ ಮಾತುಕತೆ ನಡೆಸುತ್ತಿದ್ದರೆ, ಇತ್ತ ಶ್ರೀಲಂಕಾ ಪಡೆಗಳು ಮನ್ನಾರ್ ಜಿಲ್ಲೆಯಲ್ಲಿ 53 ತಮಿಳರನ್ನು, ಟ್ರಿಂಕೋಮಲಿ ಜಿಲ್ಲೆಯ ಮೂಡೂರಿನಲ್ಲಿ 67 ತಮಿಳರನ್ನು, ವಾವುನಿಯಾದಲ್ಲಿ ಇನ್ನೂ 10 ತಮಿಳರನ್ನು ಗುಂಡಿಗಾಹುತಿ ಮಾಡಿದರು. ಪರಿಣಾಮವಾಗಿ ಸರ್ಕಾರದೊಡನೆ ಮಾತುಕತೆ ನಡೆಸಿ ಪ್ರಯೋಜನವಿಲ್ಲ, ಈಳಂ ಬೇಡಿಕೆಯ ಬಗ್ಗೆರಾಜಿಮಾಡಿಕೊಳ್ಳುವುದು ಸಾಧ್ಯವಿಲ್ಲ ಎಂಬ ಭಾವನೆ ಸಮರಶೀಲ ತಮಿಳು ಸಂಘಟನೆಗಳಲ್ಲಿ ಉಂಟಾಯಿತು.

ಕೆ. ವಿ.

ಬೆಂಗಳೂರಿನಲ್ಲಿ ನವಂಬರ್ 1986 ರಲ್ಲಿ ಸಾರ್ಕ್ ಸಮ್ಮೇಳನದ ದಿನಗಳಲ್ಲಿ ಕೆಲವು ಬೆಳವಣಿಗೆಗಳು ಕಂಡುಬಂದವು. ಸಮ್ಮೇಳನಕ್ಕೆಂದು ಬಂದ ಅಧ್ಯಕ್ಷ ಜಯವರ್ಧನೆಯವರೊಡನೆ ಪ್ರಧಾನಿ ರಾಜೀವ್ ಗಾಂಧಿಯವರ ನಾಲ್ಕು ಸುತ್ತಿನ ಮಾತುಕತೆಗಳು, ಶ್ರೀಲಂಕಾ ವಿದೇಶಾಂಗ ಮಂತ್ರಿ ಹಮೀದ್ ಜೊತೆ ಎಲ್. ಟಿ. ಟಿ. ಇ. ಮುಖಂಡರ ಮಾತುಕತೆಗಳು ಬೆಂಗಳೂರಿನಲ್ಲಿ ಮತ್ತು ದೆಹಲಿಯಲ್ಲಿ, ಮದ್ರಾಸಿನಲ್ಲಿ "ಆಪರೇಶನ್ ಟೈಗರ್" ಮೂಲಕ ಸಮರಶೀಲ ಸಂಘಟನೆಗಳ ಸದಸ್ಯರನ್ನು ನಿಶ್ಯಸ್ತ್ರಗೊಳಿಸಿದ್ದು,ಅವುಗಳ ಮುಖಂಡರ ಬಂಧನ, ಬಿಡುಗಡೆ, ಸಂಪರ್ಕ ಸಾಧನಗಳನ್ನು ವಶಪಡಿಸಿಕೊಂಡದ್ದು, ಹಿಂತಿರುಗಿಸಿದ್ದು ಇತ್ಯಾದಿ.

ಸಾರ್ಕ್ ಸಮ್ಮೇಳನದ ಸಮಯದ ಮಾತುಕತೆಗಳು ಹಾಗೂ ನಂತರ ಕೊಲಂಬೋದಲ್ಲಿ ಭಾರತದ ಮಂತ್ರಿಗಳಿಬ್ಬರ ಪ್ರಯತ್ನಗಳ ಪರಿಣಾಮವಾಗಿ ಡಿಸೆಂಬರ್ 19ರಂದು ಜಯವರ್ಧನೆ ಸರ್ಕಾರದಿಂದ ಹೊಸ ಪ್ರಸ್ತಾಪಗಳು ಬಂದವು.

ಸರ್ಕಾರದ ವಿವರ ನೆಲೆಗೊಳಿಸುವ ಕ್ರಮಗಳಿಂದಾಗಿ ಸಿಂಹಳೀಯರ ಸಂಖ್ಯೆ ಹೆಚ್ಚಿದ್ದ ಪೂರ್ವ ಪ್ರಾಂತ್ಯದ ಲಿಂಪರ್ಯಾನ್ನು ಅದರಿಂದ ಪ್ರತ್ಯೇಕಿಸಿ ಉಳಿದ ಪೂರ್ವ ಪ್ರಾಂತ್ಯ ಮತ್ತು ಉತ್ತರ ಪ್ರಾಂತ್ಯದೊಳಗೆ ತಮಿಳರ ಶೇಖಡಾವಾರು ಹೆಚ್ಚಿಸುವುದು,ಉತ್ತರ ಮತ್ತು ಪೂರ್ವ ಪ್ರಾಂತ್ಯಗಳ ನಡುವೆ ಹೆಚ್ಚಿನ ಸಾಂಸ್ಕಿಕ ಸಂಬಂಧಕ್ಕೆ ಸೌಲಭ್ಯ ಒದಗಿಸುವುದು, ಎರಡೂ ಪ್ರಾಂತ್ಯಗಳಿಗೆ ಒಂದೇ ವಿಶ್ವವಿದ್ಯಾಲಯ, ಯೋಜನಾ ಆಯೋಗ, ಅಂತರ-ಸಚಿವಾಲಯ ಸಮಿತಿಗಳು, ಬೇರೆಡೆಯಿಂದ ಜನರನ್ನು ತಂದು ನೆಲೆಗೊಳಿಸುವ ಕ್ರಮದ ಮೇಲೆ ಹತೋಟಿ, ಪ್ರಾಂತ್ಯ, ಜಿಲ್ಲಾ ಹಾಗೂ ವಿಭಾಗ ಪ್ರದೇಶಗಳ ಪುನರ್ವಿಂಗಡನೆಗೆ ಗಡಿ ಆಯೋಗ–ಇವು ಡಿಸೆಂಬರ್ 19ರ ಪ್ರಸ್ತಾಪಗಳ ಅಂಶಗಳು.

ಹಿಂದಿನಂತೆ ಈ ಬಾರಿಯೂ ಶ್ರೀಲಂಕಾ ಸರ್ಕಾರ ಪ್ರತಿಗಾಮಿಗಳ ಒತ್ತಡಕ್ಕೆ ಮಣಿದು ಈ ಪ್ರಸ್ತಾಪಗಳನ್ನು ಮೊದಲು ಪರಿಷ್ಕರಿಸಲು ಪ್ರಯತ್ನಿಸಿತು. ನಂತರ ಈ ಪ್ರಸ್ತಾಪಗಳನ್ನು ಕೊಟ್ಟೇ ಇಲ್ಲವೆಂಬಂತೆ ವರ್ತಿಸಿ ತಮಿಳರನ್ನು ಸಾಮೂಲ ನಾಶಗೊಳಿಸ ಬಯಸುವ ಮಿಲಿಟರಿ ಕ್ರಮ ಆರಂಭಿಸಿತು. ಉರುವಲಿನ ಮೇಲೆ ನಿರ್ಬಂಧ ಹೇರಿ, ವಿದ್ಯುಚ್ಛಕ್ತಿ ಪೂರೈಕೆ, ಸಾಗಾಣಿಕೆ ನಿಲ್ಲಿಸಿ ಆರ್ಥಿಕ ದಿಗ್ಬಂಧನ ಹೋರಿಸಿತು. ಎಪ್ರಿಲ್ 18ರಂದು ಟ್ರಿಂಕೋಮಾಲಿ ಜಿಲ್ಲಾ ಗಡಿಯ ಬಳಿ 125 ಸಿಂಹಳೀ ಪ್ರಯಾಣಿಕರ ಹತ್ಯೆ,ಮೂರು ದಿನಗಳ ನಂತರ ಕೊಲಂಬೋದ ಪ್ರಮುಖ ಬಸ್ ನಿಲ್ದಾಣದಲ್ಲಿ ಶಕ್ತಿಶಾಲೀ ಬಾಂಬೊಂದರ ಸ್ಫೋಟದಿಂದ 200 ಮಂದಿಯ ಸಾವು. ಇದು ಸಮರಶೀಲ ತಮಿಳು ಸಂಘಟನೆಗಳ ಕೃತ್ಯವಾಗಿರದೆ ಇಸ್ರೇಲೀ ನೆರವಿನಿಂದ ಸರ್ಕಾರವೇ ಮಾಡಿಸಿರಬಹುದಾದ ಕೃತ್ಯ ಎಂದು ಶ್ರೀಲಂಕಾದ ವಿರೋಧ ಪಕ್ಷಗಳು ಕೂಡಾ ಸಂಶಯ ವ್ಯಕ್ತಪಡಿಸಿದರೂ ಯಾವ ಪುರಾವೆಯೂ ಇಲ್ಲದೆ ಸರ್ಕಾರ ಕ್ರೂರ ಪ್ರತೀಕಾರ ಕ್ರಮಗಳನ್ನು ತೀವ್ರಗೊಳಿಸಿತು. ಸತತವಾಗಿ ಜಾಫ್ನಾ ಪ್ರಾಯದ್ವೀಪದ ಮೇಲೆ ವಿಮಾನಗಳ ಮೂಲಕ ಬಾಂಬ್‌ದಾಳಿ, ಭೂಸೇನೆಯಿಂದ ತಮಿಳು ವಸತಿ ಪ್ರದೇಶಗಳ ಮೇಲೆ ಸಿಕ್ಕಾಪಟ್ಟೆ ಶೆಲ್‌ದಾಳಿ, ಶ್ರೀಲಂಕಾ ನಾವಿಕ ಪಡೆಯಿಂದ ಕರಾವಳಿ ಪ್ರದೇಶಗಳ ಮೇಲೆ ಗುಂಡಿನ ದಾಳಿ. ಕೇವಲ ಐದೇ ದಿನಗಳಲ್ಲಿ 600 ನಾಗರಿಕರ ಹತ್ಯೆ. ಮುಂದಿನ ಘಟನೆಗಳಂತೂ ಈಗ ಎಲ್ಲರಿಗೂ ಗೊತ್ತಿದೆ.

ಯಲ್ಲಿ ತಾನೇ ಸ್ವತಃಭಾಗಿಯಾಗದ್ದರೂ ಅದನ್ನು ಮೂಲೆಗೆ ತಳ್ಳಿ, ತನ್ನದೇ ದೇಶದ ಒಂದು ಜನ ವಿಭಾಗದ ವಿರುದ್ದ ಅಮೇರಿಕನ್' ಬ್ರಿಟೀಶ್, ಹಾಗೂ ಇಸ್ರೇಲಿ ಹಾಗೂ ಪಾಕಿಸ್ತಾನೀ ಬಾಡಿಗೆ ಸೈನಿಕರ ನೆರವು ಪಡೆದದ್ದು,ಈ ಬಾಡಿಗೆ ಸೈನಿಕರು ಸ್ವತಃ ಜಯವರ್ಧನೆಯವರೇ "ಅತಂತ್ಯ ಅಶಿಸ್ತಿನ" ಪಡೆಯೆಂದು ಕರೆದ ಶ್ರೀಲಂಕಾ ಪಡೆಗೆ ಗೆರಿಲ್ಲಾ–ವಿರೋಧಿ ಕಾರ್ಯಾಚರಣೆಗಳ ತರಬೇತಿ ನೀಡಿ ಅದನ್ನೊಂದು ಅತ್ಯಂತ ಅಮಾನುಷ ಪಡೆಯಾಗಿ ಪರಿವರ್ತಿಸಿ ಸಾವಿರಾರು ಅಮಾಯಕ ತಮಿಳು ನಾಗರೀಕರ ಕೊಲೆ, ಸುಲಿಗೆ, ಅತ್ಯಾಚಾರ ನಡೆಸಿರುವುದು ಈಗ ಜಗಜ್ಜಾಹೀರಾಗಿರುವ ಸಂಗತಿ. ಭಾರತೀಯ ವಾಯುಪಡೆಗಳು ಜಾಪ್ನಾದ ಮೇಲೆ ಪರಿಹಾರ ಸಾಮಗ್ರಿ ಇಳಿಸಿದ್ದು ಶ್ರೀಲಂಕಾದ ಸಾರ್ವಭೌಮತ್ವದ ಉಲ್ಲಂಘನೆ ಎಂದು ಖಂಡಿಸಿರುವ

ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಡುತ್ತಿರುವ ತಮಿಳು ಬಡಜನರನ್ನು ಅಲ್ಲಿಯ ಸರ್ಕಾರ ಪೂರ್ಣವಾಗಿ ದಮನ ಮಾಡಲು ಪಣತೊಟ್ಟಿರುವಂತೆ ವರ್ತಿಸುತ್ತಿದೆ. ಇದು ಅಲ್ಲಿ ತಮಿಳು ತೀವ್ರಗಾಮಿತನಕ್ಕೆ ಹಾಗೂ ಜನರ ಮರಣ ಹತ್ಯೆಗೆ ಕಾರಣವಾಗಿದೆ.

ಸಾಮ್ರಾಜ್ಯಶಾಹಿಗಳ ಕುತಂತ್ರ ವಿಫಲಗೊಳಿಸಿ

ಜಾಗೃತಿಕ ಪ್ರಾಬಲ್ಯಗಳಿಸುವ ಸಾಮ್ರಾಜ್ಯಶಾಹಿಗಳದ್ದು ಶ್ರೀಲಂಕಾ ಸಮಸ್ಯೆ ಉಲ್ಬಣಗೊಳ್ಳುವಲ್ಲಿ ಒಂದು ಪ್ರಮುಖ ಪಾತ್ರ. ಶ್ರೀಲಂಕಾದಂತಹ ನವವಿಮೋಚಿತ ಸಣ್ಣ ದೇಶಗಳನ್ನು ತಮ್ಮ ಕೈಗೊಂಬೆಯನ್ನಾಗಿಸಿಕೊಂಡು ಭಾರತವನ್ನು ಎಲ್ಲಾ ಕಡೆಗಳಿಂದ ಸುತ್ತುವರಿಯುವುದು ಸಾಮ್ರಾಜ್ಯಶಾಹಿಗಳ ಪಿತೂರಿಯ ಒಂದು ಮುಖ್ಯ ಅಂಗ. ಜಯವರ್ಧನೆ ಸರ್ಕಾರ ಅದಕ್ಕೆ ಸಂಪೂರ್ಣ ನೆರವು ಅವಕಾಶ ನೀಡಿದೆ. ಭಾರತ ಸಮಾಜವಾದಿ ದೇಶಗಳು ಮತ್ತು ಶ್ರೀಲಂಕಾದ ಎಡ ಪಕ್ಷಗಳು ಈ ಸರ್ಕಾರದ ಪ್ರಥಮ ವೈರಿಗಳೆಂದರೆ ಇತರ ದೇಶಗಳ ಸ್ವಾತಂತ್ರ ಹರಣ ಮಾಡುವ ಸಾಮ್ರಾಜ್ಯ ಶಾಹಿಗಳು ಅದರ ಮಿತ್ರರು ಸಾಮ್ರಾಜ್ಯಶಾಹಿಯ ವಿರುದ್ಧ ಅಲಿಪ್ತ ದೇಶಗಳೆಲ್ಲಾ ಒಂದಾಗಬೇಕೆಂಬ ಅಲಿಪ್ತ ಆಂದೋಲನದ ಕರೆ ಶ್ರೀಲಂಕಾದ ರಾಜಕಾರಣಿಗಳಿಗೆ ತಮ್ಮದೇ ದೇಶದ ಜನರ ಮೇಲೆ ವಿದೇಶಗಳ, ಅದರಲ್ಲೂ ಸಾಮ್ರಾಜ್ಯಶಾಹಿ ದೇಶಗಳ ಬಾಡಿಗೆ ಪಡೆಗಳನ್ನು ಹರಿಹಾಯ ಬಿಡುವುದು ತಮ್ಮ ದೇಶದ ಸ್ವಾತಂತ್ರ್ಯದ, ಸಾರ್ವಭೌಮದ ಉಲ್ಲಂಘನೆಯೆಂದು ಅದೇಕೋ ಅನ್ನಿಸುತ್ತಿಲ್ಲ.

ಇಸ್ರೇಲ್‌ನೊಂದಿಗೆ ಶ್ರೀಲಂಕಾ ಸರ್ಕಾರದ ನೇರ ರಾಜ್ಯ ತಾಂತ್ರಿಕ ಸಂಬಂಧವಿಲ್ಲದ್ದರಿಂದ ಕೋಲಂಬೋದ ತನ್ನ ದೂತಾವಾಸದಲ್ಲಿ ಇಸ್ರೇಲೀ ವಿಭಾಗ ತೆರೆದು ಜಯವರ್ಧನೆಗೆ ನೇರವಾದ ಸಾಮ್ರಾಜ್ಯಶಾಹಿಗಳು ಸಧ್ಯಕ್ಕಂತೂ, ಶ್ರೀಲಂಕಾದ ಜನತೆಯನ್ನು ವಿಭಜಿಸುವಲ್ಲಿ, ಪ್ರಜಾಪ್ರಭುತ್ವ ಚಳುವಳಿಯನ್ನು ದಾರಿ ತಪ್ಪಿಸುವಲ್ಲಿ, ಭಾರತದ ಬಗ್ಗೆ ತಪ್ಪು ಅಭಿಪ್ರಾಯ ಹರಡುವಲ್ಲಿ ಯಶಸ್ವಿಯಾಗಿದ್ದಾರೆ. ಜಯವರ್ಧನೆ ಸರ್ಕಾರದಿಂದ ಒಂದಾದ ಮೇಲೊಂದರಂತೆ ರಿಯಾಯ್ತಿ ಪಡೆಯುತ್ತಿದ್ದಾರೆ. ಈಗಾಗಲೇ ತಮ್ಮ ಅಪಪ್ರಚಾರಕ್ಕೆ 'ವಾಯ್ಸ್ ಆಫ್ ಅಮೇರಿಕಾ'ದ ಒಂದು ಪ್ರಬಲ ಪ್ರಸಾರಣ ಕೇಂದ್ರ ಸ್ಥಾಪಿಸಿದ್ದಾರೆ, ಅಮೇರಿಕನ್ ನಾವಿಕ ಪಡೆಗಳಿಗೆ ತಂಗುವ ಸೌಲಭ್ಯ ಪಡೆದಿದ್ದಾರೆ. ಈಗ ತಮಿಳರು ಬಹುಸಂಖ್ಯೆಯಲ್ಲಿರುವ ಟ್ರಿಂಕೋಮಾಲಿಯಲ್ಲಿ ನಾವಿಕ ನೆಲೆ ಪಡೆಯಲು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ. ಅಮೇರಿಕನ್ ಬೇಹುಗಾರರು ಎರಡೂ ಕಡೆಯಿಂದ ಸಕ್ರೀಯರಾಗಿದ್ದಾರೆ. ಎಲ್.ಟಿ.ಟಿ.ಇ.ನಲ್ಲೂ ಒಂದು ಸಿ. ಐ. ಎ. ಗುಂಪು ಸಕ್ರೀಯವಾಗಿದೆ. ಯಾವುದೇ ಒಪ್ಪಂದವಾಗದಂತೆ ಅಮೇರಿಕನ್ ಬೇಹುಗಾರರು ನೋಡಿಕೊಳ್ಳುತ್ತಿದ್ದಾರೆ.

ಭಾರತದ ರಾಜತಾಂತ್ರೀಕತೆ ಕೂಡಾ ಶ್ರೀಲಂಕಾದ ಸಮಗ್ರತೆ. ಸಾರ್ವಭೌಮತೆಗೆ ತಾನು ಬದ್ಧವಾಗಿದ್ದೇನೆ ಎಂದು ಶ್ರೀಲಂಕಾದ ಜನತೆಗೆ ಮನವರಿಕೆ ಮಾಡಿಸುವಲ್ಲಿ ತನ್ನ ದೌರ್ಬಲ್ಯ ತೋರ್ಪಡಿಸಿದೆ. ಅಮೇರಿಕ ಹಾಗೂ ಭಾರತ ಎರಡರ ನೀತಿಯೂ ಶ್ರೀಲಂಕಾದ ವಿಷಯದಲ್ಲಿ ಒಂದೇ ಎಂದು ಅಮೇರಿಕಾ ಹೇಳುತ್ತಿದೆ. ಇದು ನಿಜವಾಗಿದ್ದರೆ ಆತಂಕಕಾರಿ.

ಜಯವರ್ಧನೆ ಸರ್ಕಾರ ತನ್ನ ಮಿಲಿಟರಿ ಕಾರ್ಯಾಚರಣೆ ನಿಲ್ಲಿಸಿ, ಪ್ರತಿಯಾಗಿ ತಮಿಳು ಸಮರಶೀಲ ಸಂಘಟನೆಗಳು ತಮ್ಮ ಪ್ರತೀಕಾರ ಕಾರ್ಯಾಚರಣೆ ನಿಲ್ಲಿಸಿ ಡಿಸೆಂಬರ್ 19ರ ಪ್ರಸ್ತಾಪಗಳ ಆಧಾರದ ಮೇಲೆ ಮಾತುಕತೆ ಮುಂದುವರಿಸಿ ಶ್ರೀಲಂಕಾದ ಸಮಗ್ರತೆಯ ಚೌಕಟ್ಟಿನೊಳಗೆ ತಮಿಳರ ನ್ಯಾಯಬದ್ಧ ಆಕಾಂಕ್ಷೆಗಳನ್ನು ಈಡೇರಿಸುವ ರಾಜಕೀಯ ಪರಿಹಾರಕ್ಕೆ ಪ್ರಯತ್ನಿಸಬೇಕೆಂದು ಈ ಎಲ್ಲಾ ಶಕ್ತಿಗಳು ಒತ್ತಾಯಿಸಬೇಕು. ○

ತಮಿಳರ ತೀವ್ರಗಾಮಿ ಸಂಘಟನೆಗಳು

[5ನೇ ಪುಟದಿಂದ]

ತಮಿಳು ಈಳಂ ಈಗ ಅವರ ಬೇಡಿಕೆಯಾಯಿತು. ಅಧಿಕೃತ ಭಯೋತ್ಪಾದನೆಗೆ ಪ್ರತಿಕಾರವಾಗಿ ಶ್ರೀಲಂಕಾ ಪಡೆಗಳ ವಿರುದ್ಧ ಸಶಸ್ತ್ರ ಹೋರಾಟದಲ್ಲಿ ಇವು ಈಗ ತೊಡಗಿವೆ.

ಹೋರಾಟದ ತಂತ್ರಗಳ ಬಗ್ಗೆ ಇವುಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಇತ್ತೀಚಿಗೆ ಮೇಲೆ ಹೇಳಿದ ನಾಲ್ಕು ಸಂಘಟನೆಗಳು ಒಂದು 'ಈಳಂ 'ರಾಷ್ಟ್ರೀಯ ವಿಮೋಚನಾ ರಂಗ' ಸ್ಥಾಪಿಸಿಕೊಂಡಿವೆ. ಐದನೆಯದಾಗಿ ಪ್ಲೋಟ್ ಕೂಡಾ ಈ ರಂಗದೊಡನೆ ಸಹಕರಿಸುತ್ತಿದೆ. ಈಳಂನ ಅವರ ಪರಿಕಲ್ಪನೆ ದೋಷಪೂರಿತವಾಗಿದ್ದರೂ ದಮನಕಾರೀ ಶ್ರೀಲಂಕಾ ಪಡೆಗಳ ವಿರುದ್ಧ ಅವುಗಳ ಧೈರ್ಯದ ಪ್ರತೀಕಾರ ಕ್ರಮಗಳಿಂದಾಗಿ ತಮಿಳು ಜನತೆ ಇವರನ್ನು "ನಮ್ಮ ಹುಡುಗರು ಎಂದು ಬೆಂಬಲಿಸಿದರೆ ಅತ್ತ ಸಿಂಹಳೀಯ ಜನಾಭಿಪ್ರಾಯ ಶ್ರೀಲಂಕಾ ಪಡೆಗಳನ್ನು ಬೆಂಬಲಿಸುವಂತಾಗಿದೆ.

ಕುಡಿಯುವ ನೀರಿನ ಅಭಾವಕ್ಕೆ ಸರ್ಕಾರವೇ ಹೊಣೆ

ಕಳೆದ 40ವರ್ಷಗಳಲ್ಲಿ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್ ಸರ್ಕಾರವಾಗಲೀ 1983ರಿಂದ ರಾಜ್ಯದಲ್ಲಿಯ ಜನತಾ ಸರ್ಕಾರವಾಗಲೀ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವುದರಲ್ಲಿ ಸಂಪೂರ್ಣ ವಿಫಲಗೊಂಡಿದೆಂದು ಸಿ.ಪಿ.ಐ (ಎಂ) ಸದಸ್ಯರಾದ ಎನ್.ಕೆ. ಉಪಾಧ್ಯಾಯ ಮತ್ತು ಜಿಲ್ಲಾ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿಯವರು ತಾರೀಖು 31ರಂದು ಗುಲ್ಬರ್ಗದಲ್ಲಿತ್ತ ಜಂಟೀ ಹೇಳಿಕೆಯಲ್ಲಿ ಆಪಾದಿಸಿದ್ದಾರೆ. ಬಿಜಾಪುರ-ಗುಲ್ಬರ್ಗಗಳಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರವೆದ್ದಿದೆ. ಆದರೆ ಕೇಂದ್ರ-ರಾಜ್ಯ ಮಂತ್ರಿಗಳು ಪತ್ರಿಕಾ ಹೇಳಿಕೆ ನೀಡುವುದರಲ್ಲೇ ಸಮಾಧಾನಗೊಂಡಿದ್ದಾರೆ. 6-7ವರ್ಷಗಳ ಹಿಂದೆಯೇ ಬೆಣ್ಣೆ ತೋರೆ ಹಾಗೆಯೇ ಕೋಲಾರದಿಂದ ಪೈಪ್ ಲೈನ್ ಹಾಕುವ ಯೋಜನೆಗಳನ್ನು ಸಿದ್ಧಗೊಳಿಸಿದ್ದರೂ ಕೂಡಾ ಜನತಾ ಸರ್ಕಾರ ಹಾಗೆಯೇ ಕೇಂದ್ರ ಸರ್ಕಾರ ಕಣ್ಣೀರು ಗುರಿಸುತ್ತ ಬಂದದ್ದಲ್ಲದೆ, ಆ ಯೋಜನೆಗಳನ್ನು ಪೂರ್ಣಗೊಳಿಸುವ ಕ್ರಮ ಕೈಗೊಳ್ಳದೆ ಕುಡಿಯುವ ನೀರಿನ ಅಭಾವ ಉಂಟು ಮಾಡಿದ್ದಾರೆಂದೂ, ಹರಿಯುವ ನದಿ ನೀರನ್ನು ಉಪಯೋಗಿಸಲು ಸಮಗ್ರ ಯೋಜನೆಯನ್ನು ತಯಾರಿಸಲು ಕಾಂಗ್ರೆಸ್ ಹಾಗೂ ಜನತಾ ಸರ್ಕಾರಗಳು ವಿಫಲಗೊಂಡಿರುವುದರಿಂದ ಜನತೆ ಪಕ್ಷ ಬೇಧ ಮರೆತು ಹೋರಾಟಕ್ಕಿಳಿಯಬೇಕೆಂದು ಅವರಿಬ್ಬರೂ ಕರೆ ಕೊಟ್ಟಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಕೇಂದ್ರದ ಮಂತ್ರಿಯಾಗಿದ್ದ ವೀರೇಂದ್ರ ಪಾಟೀಲರು ತಮ್ಮ ಅಧಿಕಾರಾವಧಿಯಲ್ಲಿ ನೀರಿನ ಸಮಸ್ಯೆ ಬಗೆಹರಿಸದೆ ಈಗ ವಿನಾ ಕಾರಣ ಪತ್ರಿಕಾ ಹೇಳಿಕೆ ನೀಡಿ ಗೊಂದಲ ಎಬ್ಬಿಸುತ್ತಿರುವುದನ್ನು ಅವರು ಖಂಡಿಸಿದ್ದಾರೆ. ○

ಅಲಿಪ್ತ ವಿದೇಶಾಂಗ ನೀತಿ ರಕ್ಷಿಸಿ ಸಿಐಟಿಯು ಕರೆ

[7ನೇ ಪುಟದಿಂದ]

ನೆರವಾಗಿದೆ, ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಬಲಯುತಗೊಳಿಸಿದೆ ಮತ್ತು ಜಾಗತಿಕ ಶಕ್ತಿಗಳ ಸಮತೋಲನವನ್ನು ಶಾಂತಿಯ ಪರವಾಗಿ ಹಾಗೂ ಸಾಮ್ರಾಜ್ಯಶಾಹಿಯ ವಿರುದ್ಧ ತಿರುಗಿಸಿದೆ ಎಂದು ನಿರ್ಣಯ ಗಮನಿಸಿದೆ.

ಅಲಿಪ್ತ ನೀತಿಯ ಈ ದಶಕಗಳಲ್ಲಿ ಮೂಡಿ ಬಂದ ಭಾರತ ಸೋವಿಯೆತ್ ಮಿತ್ರತ್ವ ಸಂಧಿ ಸಾಮ್ರಾಜ್ಯಶಾಹೀ ಪಿತ್ರೂರಿಗಳ ವಿರುದ್ಧ ದೇಶದ ಭದ್ರತೆಯನ್ನು ಬಲಗೊಳಿಸಿದೆ ಎಂದು ಹೇಳಿರುವ ನಿರ್ಣಯ ಈ ಎರಡು ದೇಶಗಳು ಶಾಂತಿಗೆ ಬದ್ಧವಾಗಿರುವುದನ್ನು ಹಾಗೂ ಜಾಗತಿಕ ಶಾಂತಿ ರಕ್ಷಣೆಯ ಸೋವಿಯೆತ್ ಪ್ರಸ್ತಾಪಗಳಿಗೆ ಭಾರತದ ಬೆಂಬಲವನ್ನು ವ್ಯಕ್ತಪಡಿಸಿರುವ ಗೋರ್ಬಚೆವ್-ರಾಜೀವಗಾಂಧಿ ಘೋಷಣೆಯನ್ನು ಸ್ವಾಗತಿಸಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಯ ಆಕ್ರಾಮಕ ಪ್ರಯತ್ನಗಳ ವಿರುದ್ಧ ದೃಢ ವಿರೋಧ ವ್ಯಕ್ತ ಪಡಿಸಿರುವ, ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಮತ್ತು ಜಾಗತಿಕ ಶಾಂತಿಗೆ ಬೆಂಬಲ ನೀಡುತ್ತಾ ಬಂದಿರುವ ಅಲಿಪ್ತ ಆಂದೋಲನವನ್ನು ಸಮ್ಮೇಳನ ಅಭಿನಂದಿಸಿ ಈ ಆಂದೋಲನದ ಚಟುವಟಿಕೆಗಳು, ವರ್ಣದ್ವೇಷಿ ಆಳ್ವಿಕೆಯ ಖಂಡನೆ, ವಿಮೋಚನಾ ಆಂದೋಲನಗಳ ವಿರುದ್ಧ ಅಮೇರಿಕನ್ ಪಿತ್ರೂರಿಗಳನ್ನು ಅದು ಬಯಲಿಗೆಳೆದಿರುವುದು ಅದನ್ನು ಸಾಮ್ರಾಜ್ಯಶಾಹಿ, ಕೋಮುವಾದ ಮತ್ತು ಜಿಯೋನಿಸಂ ವಿರುದ್ಧ ಹಾಗೂ ಜಾಗತಿಕ ಶಾಂತಿ ಮತ್ತು ನಿಶಸ್ತ್ರೀಕರಣದ ಪರವಾಗಿ ಜಾಗತಿಕ ಅಭಿಪ್ರಾಯ ಮೂಡಿಸುವಲ್ಲಿ ಒಂದು ಶಕ್ತಿಶಾಲೀದ ನಿಯಾಗುವಂತೆ ಮಾಡಿದೆ ಎಂದು ನಿರ್ಣಯ ಹೇಳಿದೆ. ○

ಮೈಸೂರಿನಲ್ಲಿ ಪೌರ ಕಾರ್ಮಿಕರ ಮುಷ್ಕರ

ಮೈಸೂರಿನ ಪೌರ ಕಾರ್ಮಿಕರು ಮೇ 22ರಂದು ಮಿಂಚಿನ ಮುಷ್ಕರ ನಡೆಸಿದರು. ಮೈಸೂರು ಸಿಟಿ ಕಾರ್ಪೊರೇಶನ್ ಎಂಪ್ಲಾಯಿಸ್‌ಯೂನಿಯನ್ ಬೇಡಿಕೆಗಳ ಇತ್ಯರ್ಥಕ್ಕಾಗಿ ಕಮಿಷನರ್‌ಗೆ ಮುಷ್ಕರದ ನೋಟೀಸನ್ನು ನೀಡಿ ಬೇಡಿಕೆಗಳು ಈಡೇರದಿದ್ದರೆ ಏ. 21ರಂದು ಮುಷ್ಕರ ನಡೆಸುವುದಾಗಿ ತಿಳಿಸಿತ್ತು. ಆದರೆ ಕೆಲವು ಬೇಡಿಕೆಗಳ ಬಗ್ಗೆ ಕ್ರಮ ಕೈಗೊಳ್ಳುವ ಭರವಸೆ ದೊರೆತದ್ದರಿಂದ ಮುಷ್ಕರವನ್ನು ಮುಂದೂಡಲಾಗಿತ್ತು. ಈ ಮಧ್ಯೆಮೇ 21ರಂದು ಸ್ಥಾಯೀ ಸಮಿತಿ ಸಭೆ ನಡೆದ ಸಂದರ್ಭದಲ್ಲಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ಸಮರ್ಪಕವಾದ ಉತ್ತರ ದೊರೆಯಲಿಲ್ಲ. ಕಾರ್ಮಿಕರು ಪ್ರತಿಭಟಿಸಿದಾಗ ಪೊಲೀಸರನ್ನು ಕರೆಸಲಾಯಿತು. ಇದರಿಂದ ರೊಚ್ಚಿಗೆದ್ದ ಪೌರ ಕಾರ್ಮಿಕರು ಮೇ 22ರಂದು ಮುಷ್ಕರ ನಡೆಸಿದರು. ಮುಂಜಾನೆ ಎಂಟು ಗಂಟೆಗೆ ಪುರಭವನದೆದುರು ನೆರೆದ ಕಾರ್ಮಿಕರು ಅಧಿಕಾರಿಗಳು ಮತ್ತು ಕಾರ್ಪೋರೇಟರುಗಳ ವರ್ತನೆಯನ್ನು ಖಂಡಿಸಿ ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ಬೀದಿಗಳಲ್ಲಿ ಪ್ರದರ್ಶನ ನಡೆಸಿದರು. ನಂತರ ಸಂಘದ ಅಧ್ಯಕ್ಷರಾದ ಕಾ|ಎಂ. ಎನ್. ಉಗ್ರಪ್ಪನವರು ಕಮಿಷನರ್ ಅನ್ನು ಭೇಟಿಯಾಗಿ ಮಾತುಕತೆ ನಡೆಸಿದರೂ ಕೂಡಾ ಅದರಿಂದ ಏನೂ ಪ್ರಯೋಜನವಾಗದೆ ಕಾರ್ಮಿಕರು ಮುಷ್ಕರವನ್ನು ಮುಂದುವರಿಸಿ ಸಭೆ ನಡೆಸಿದರು. ಸಭೆ ನಡೆಯುತ್ತಿದ್ದಾಗ ಶಾಸಕ ವೇದಾಂತ ಹೆಮ್ಮಿಗೆ ಇವರೊಡನೆ ಕಮಿಷನರ್ ಮತ್ತು ಮೇಯರ್‌ರವರುಗಳು ಬಂದು ಬೇಡಿಕೆಗಳ ಈಡೇರಿಸುವ ವಾಗ್ದಾನ ನೀಡಿ ಮುಷ್ಕರ ನಿಲ್ಲಿಸಲು ವಿನಂತಿಸಿದ ತರುವಾಯ ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಂಡರೆಂದು ಸಂಘದ ಹೇಳಿಕೆ ತಿಳಿಸಿದೆ. ●

ಸಿ. ಪಿ. ಐ. (ಎಂ) ನೇತೃತ್ವದ ಮಂಡಲ ಪಂಚಾಯತಿ

ಆಳಂದ 24. ಅಂಬಲಗಾ ಮಂಡಲ ಪಂಚಾಯತ್ ಮೊದಲ ಸಭೆ ಅಬ್ದುಲ್‌ರವ್ ತಹಸಿಲ್ದಾರ ಅವರ ಅಧ್ಯಕ್ಷತೆಯಲ್ಲಿ ನಡೆದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾ|| ಮೇಘರಾಜ ಕಠಾರಿ ಪ್ರಧಾನರಾಗಿಯೂ ಮತ್ತು ರಾಜಮ್ಮ ಅವರು ಉಪ ಪ್ರಧಾನರಾಗಿಯೂ ಆಯ್ಕೆಯಾದರು.

ವಿಜಯೋತ್ಸವ ಅಂಗವಾಗಿ ನಡೆದ ಬಹಿರಂಗ ಸಭೆಯಲ್ಲಿ ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಕಾ|| ಕಲ್ಲಪ್ಪ ಕಿರಣಗಿ ಮಾತನಾಡುತ್ತ ರೈತ ಕಾರ್ಮಿಕರು ಸಂಘಟಿತರಾಗಿ ಹೋರಾಟ ನಡೆಯಿಸಿ ರಾಜಕೀಯ ಅಧಿಕಾರ ಪಡೆಯಲು ಮುಂದಾಗಬೇಕೆಂದು ಕರೆ ಕೊಟ್ಟರು. ಪ್ರಧಾನರಾದ ಮೇಘರಾಜ ಕಠಾರಿಯವರು ಜಿಲ್ಲೆಯ 166 ಮಂಡಲ ಪಂಚಾಯತಗಳಲ್ಲಿ ಮಾದರಿಯ ಮಂಡಲ ಪಂಚಾಯತ್ ಆಗಿ ನಡೆಸುವುದಾಗಿ ಹೇಳಿದರು. ಕಾ|| ಮಾರುತಿ ಮಾನಪಡೆ (ಜಿಲ್ಲಾಪರಿಷತ್ ಸದಸ್ಯರು) ಕಾ|| ಬಸವರಾಜ ಮರಡಿ ವಕೀಲರು ಸಭೆಯಲ್ಲಿ ಮಾತನಾಡಿದರು. ಬಸವಕಲ್ಯಾಣ ತಾಲ್ಲೂಕಿನ ಹಾರಕೂಡ ಮಂಡಲ ಪಂಚಾಯತ್‌ಉಪ ಪ್ರಧಾನರಾದ ಚಂದ್ರಕಾಂತ ಬಿರಾದಾರ ಸಭೆಯಲ್ಲಿ ಉಪಸ್ಥಿತರಿದ್ದರು. ಸುತ್ತಮುತ್ತ ಹಳ್ಳಿಗಳಿಂದ ನೂರಾರು ರೈತ-ಕೃಷಿ ಕಾರ್ಮಿಕರು ಸಭೆಗೆ ಹಾಜರಾಗಿದ್ದರು. ಸಭೆಯ ಅಧ್ಯಕ್ಷತೆ ಗುರಲಿಂಗಪ್ಪ ಬಣಕೆ ವಹಿಸಿದ್ದರು. ಎಲ್ಲಾ ಮಂಡಲ ಸದಸ್ಯರಿಗೂ ಮತ್ತು ಪ್ರಧಾನ ಕಠಾರಿಯವರಿಗೂ ಉಪ ಪ್ರಧಾನರಾದ ರಾಜಮ್ಮನವರಿಗೂ ಸನ್ಮಾನಿಸಲಾಯಿತು. ●

ಚಿಮೇನಿ ಹುತಾತ್ಮರಿಗೆ ನಿಧಿ

ಇತ್ತೀಚಿನ ಕೇರಳ ಚುನಾವಣೆಯ ಸಂದರ್ಭದಲ್ಲಿ ಕಯ್ಯೂರಿನ ಚಿಮೇನಿಯಲ್ಲಿ ಕಾಂಗ್ರೆ ಗೂಂಡಾಗಳು ನಡೆಸಿದ ಹತ್ಯಾಕಾಂಡದಲ್ಲಿ ನಿಧನರಾದ ಸಿ.ಪಿ.ಐ (ಎಂ) ಪಕ್ಷದ ಹುತಾತ್ಮ ಕಾರ್ಯಕರ್ತರ ಕುಟುಂಬಕ್ಕೆ ಬೆಂಗಳೂರಿನ ಕರ್ನಾಟಕ ಪ್ರಗತಿಪರ ಕಲಾಸಂಘ (ಸಿ.ಪಿ.ಎ.ಸಿ) ಒಂದು ಸಾವಿರ ರೂಪಾಯಿಗಳ ನಿಧಿಯನ್ನು 'ಚಿಮೇನಿ ಸಹಾಯನಿಧಿ,ಗೆ ಅರ್ಪಿಸಲಾಯಿತೆಂದು ಸಂಘದ ಕಾರ್ಯದರ್ಶಿಯವರಾದ ಈ. ಆರ್. ಕೆ. ವಾರಿಯರ್ ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಅವರು ಪ್ರದರ್ಶಿಸಿದ "ಸಾರ್ಟಕಸ್" ನಾಟಕದಗಳಿಕೆಯನ್ನು ಚೀಮೆನಿಯ ಸ್ಪಾರ್ಟಕಸ್ ಕುಟುಂಬಗಳಿಗೆ ನೀಡಿರುವುದು ಅಭಿನಂದನಾರ್ಹ. ●

ಎಸ್. ಎಫ್. ಐ. ರಾಜ್ಯ ಸಮಿತಿಯ ನಿರ್ಣಯಗಳು

ಮೇ 30ರಂದು ರಾಯಚೂರಿನಲ್ಲಿ ಕಾ| ಎಸ್. ವೈ. ಗುರುಶಾಂತ್‌ರವರ ಅಧ್ಯಕ್ಷತೆಯಲ್ಲಿ ಎಸ್.ಎಫ್.ಐ.ರಾಜ್ಯ ಸಮಿತಿ ಸಭೆಯು ಜರುಗಿತು. ಅಖಿಲ ಭಾರತ ಅಧ್ಯಕ್ಷರಾದ ಕಾ| ವಿಜಯ ರಾಘವನ್‌ರವರು ಸಭೆಯಲ್ಲಿ ಭಾಗ ವಹಿಸಿ ಮಾರ್ಗದರ್ಶನ ನೀಡಿದರು.

ಸಭೆಯು ಪ್ರಾರಂಭದಲ್ಲಿ ಹುತಾತ್ಮರಾದ ಕಾ| ವಿ.ಪಿ. ಚಿಂತನ್, ಕಾ| ದೀಪಕ್ ಧವನ್, ಕಾ| ಪುಷ್ಪರಾಣಿ ಮಹಾತೋ, ಕಾ|| ವೈಜನಾಥ್ ಪ್ರಸಾದ್, ಕಾ| ಕನ್ಹಾರಾಮ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಿತು. ಮಾಜಿ ಪ್ರಧಾನಿ ಚರಣ ಸಿಂಗ್‌ರವರ ನಿಧನಕ್ಕೆ ಸಹ ಎಸ್.ಎಫ್.ಐ. ತನ್ನ ಸಂತಾಪ ವ್ಯಕ್ತಪಡಿಸಿದೆ.

ತರಬೇತಿ ಶಿಬಿರ : ಸದರಿ ಶೈಕ್ಷಣಿಕ ವರ್ಷದ ಸಂಘಟನಾ ಯೋಜನೆಯನ್ನು ಸಿದ್ಧಪಡಿಸಿದೆ. ಕಾರ್ಯಕರ್ತರಿಗೆ ತರಬೇತಿ ನೀಡಲು ಆಗಸ್ಟ್ 2ರಿಂದ 8ರ ವರೆಗೆ ಹಂಪೆಯಲ್ಲಿ ಆರು ದಿನಗಳ ರಾಜ್ಯಮಟ್ಟದ ಅಧ್ಯಯನ ಶಿಬಿರವೊಂದನ್ನು ಏರ್ಪಡಿಸಲು ನಿರ್ಧರಿಸಲಾಗಿದೆ.

ಆಫ್ರಿಕಾ ದಿನಾಚರಣೆ : ವಿಶ್ವರಾಷ್ಟ್ರಗಳ ಸಂಸ್ಥೆಯ ಕರೆಯ ಮೇರೆಗೆ ಜೂ. 26ರಂದು ಬೆಂಗಳೂರಿನಲ್ಲಿ 'ಆಫ್ರಿಕಾ ದಿನಾಚರಣೆ'ಯನ್ನು ಯಶಸ್ವಿಗೊಳಿಸಲು ಸಮಾನ ಧೋರಣೆಯ ಸಂಘಟನೆಗಳೊಂದಿಗೆ ಸಮಾಲೋಚಿಸಿ ಜಂಟಿ ಸಮಾವೇಶವೊಂದನ್ನು ನಡೆಸಲು ತೀರ್ಮಾನಿಸಲಾಗಿದೆ.

ನಿರ್ಣಯಗಳು : ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ವಿದ್ಯಾರ್ಥಿ ಸಂಘಗಳನ್ನು ರಚಿಸಲು ಹಾಗೂ ವಿ.ವಿ. ಸೆನೆಟ್‌ಗಳಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯಕ್ಕೆ ಶೀಘ್ರ ಚುನಾವಣೆ ನಡೆಸಲು ಒತ್ತಾಯಿಸಲಾಗಿದೆ.

○ ರಾಜ್ಯದ ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳ ಕುರಿತು ಮಾಸಾಂತ್ಯದಲ್ಲಿ ಸರ್ಕಾರಕ್ಕೆ ಬೇಡಿಕೆ ಪತ್ರವೊಂದನ್ನು ಸಲ್ಲಿಸಿ ಸೂಕ್ತ ಚಳುವಳಿ ಕಾರ್ಯಕ್ರಮ ರೂಪಿಸಲು ತೀರ್ಮಾನಿಸಲಾಗಿದೆ.

○ ಕೇಂದ್ರ ಕಾಂಗ್ರೆಸ್(ಐ) ಸರ್ಕಾರದ ಭ್ರಷ್ಟಾಚಾರ ಪ್ರಕರಣಗಳನ್ನು ಹಾಗೂ ರಾಜ್ಯದಲ್ಲಿ ವಿದ್ಯುತ್ ಮತ್ತು ಹಾಲಿನದರವನ್ನು ವಿಪರೀತವಾಗಿ ಏರಿಸಿರುವ ಜನತಾ ಸರ್ಕಾರದ ಕ್ರಮವನ್ನು ಸಭೆಯು ಖಂಡಿಸಿದೆ. ಮೀರತ್‌ಹಾಗೂ ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ಸಂಭವಿಸಿದ ಕೋಮು ಗಲಭೆಯ ಕುರಿತು ತನ್ನ ಕಳವಳ ವ್ಯಕ್ತಪಡಿಸಿದೆ.

ಸಾಂಸ್ಕೃತಿಕ ರಂಗ

(2ನೇ ಪುಟದಿಂದ)

ಬೆಂಗಳೂರಿನಲ್ಲಿ ಜೂನ್ 2 ಮತ್ತು 3 ರಂದು ಚೌಡಯ್ಯ ಸ್ಮಾರಕ ಭವನದಲ್ಲಿ ಸೌಂಸ್ಕೃತಿಕ ಉತ್ಸವ ನಡೆಯಿತು. ಈ ಉತ್ಸವದಲ್ಲಿ ಬೆಂಕೆಯುಂಡೆಗಳೆಂದೇ ಹೆಸರಾದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್' ನೈಜೀರಿಯ, ಘಾನ' ಇಥಿಯೋಪಿಯ, ಮಾರಿಷಿಯಸ್ ಸೆನೆಗಾಲ್ ಬುರ್ಕಿನಾ ಫಾಸೋ ದೇಶಗಳು ಭಾಗವಹಿಸಿದವು. ಕಾರ್ಯಕ್ರಮವನ್ನು ಕನ್ನಡ ಮತ್ತು ಸೌಂಸ್ಕೃತಿ ಇಲಾಖೆ ಪ್ರಸ್ತುತಪಡಿಸಿತು.

ಹೃದಯ ಕಲಕುವ 'ಸ್ಪಾರ್ಟಕಸ್'

ಕರ್ನಾಟಕ ಪ್ರಗತಿಪರ ಕಲಾರಂಗದ ಆಶ್ರಯದಲ್ಲಿ ಮೇ 14 ರಂದು 'ಸ್ಪಾರ್ಟಕಸ್' ನಾಟಕವನ್ನು ಅಭಿನಯಿಸಲಾಯಿತು. ಕೇರಳದಲ್ಲಿ ಇದೇ ತಂಡದವರು ಅಭಿನಯಿಸಿದ ಈ ನಾಟಕ ಜಯಭೇರಿ ಹೊಡೆದಿತ್ತು.

ಕ್ರಿಸ್ತಪೂರ್ವ 750 ವರ್ಷಗಳ ಹಿಂದೆ ಗುಲಾಮ ಸಮಾಜದಲ್ಲಿ ಬಂಡಾಯವೆದ್ದ 'ಸ್ಪಾರ್ಟಕಸ್' ಈ ನಾಟಕದ ಮೂಲವಸ್ತು ಈಜಿಪ್ತಿನ ಗುಲಾಮರನ್ನು ರೋಮನ್‌ನಲ್ಲಿ ಮಾರಾಟ ಮಾಡುತ್ತಾರೆ. ರೋಮ್ ನಗರದಲ್ಲಿ ದಾಸ್ಯದಲ್ಲಿದ್ದ ಐದುಸಾವಿರ ಗುಲಾಮರನ್ನು ಸಂಘಟಿಸಲು ದೊರೆಗೆ ಮಾರಲ್ಪಟ್ಟ ಸ್ಪಾರ್ಟಕಸ್ ತಪ್ಪಿಸಿಕೊಳ್ಳುತ್ತಾನೆ.

'ಸ್ಪಾರ್ಟಕಸ್‌ನನ್ನು ಹಿಡಿದು ಕೊಟ್ಟರೆ ಅವನೊಬ್ಬನನ್ನೇ ಕೊಲೆ ಮಾಡುತ್ತೇವೆ ಇಲ್ಲದಿದ್ದಲ್ಲಿ ಅವನ ಬದಲಿಗೆ ಐದುಸಾವಿರ ಗುಲಾಮರನ್ನು ಕೊಲ್ಲುತ್ತೇನೆ.' ಎಂದು ಪ್ರಭುತ್ವ ಸಾರುತ್ತದೆ. ಆಗ ಎಲ್ಲಾ ಗುಲಾಮರು ತನ್ನ ನಾಯಕ ಸ್ಪಾರ್ಟಕಸ್‌ನನ್ನು ಬಿಟ್ಟುಕೊಡದೆ ತಾವೇ ಸ್ಪಾರ್ಟಕಸ್ ಎಂದು ಹೇಳಿಕೊಂಡು ಕೊಲೆಯಾಗಲು ಸಿದ್ಧವಾಗುವ ದೃಶ್ಯ ಅತ್ಯಂತ ಹೃದಯಸ್ಪರ್ಶಿ.

ಗುಲಾಮರಲ್ಲೊಬ್ಬನಾದ ಪೋಸಿಡೋಸನಿಗೆ ಅಧಿಕಾರದ ಆಮಿಷ ತೋರಿಸಿ ಸ್ಪಾರ್ಟಕಸ್‌ನನ್ನು ತೋರಿಸುವಂತೆ ಹೇಳುತ್ತಾರೆ. ಆಗ ಸ್ಪಾರ್ಟಕಸ್‌ನ ಗೆಳೆಯರು ಪೋಸಿಡೋಸ್‌ನನ್ನು ಕೊಲ್ಲಲು ಹೋಗಿ ತಾವೇ ಸೆನೆಟರ್‌ಗಳಿಗೆ ಬಲಿಯಾಗುತ್ತಾರೆ.

ಕೊನೆಗೂ ಸ್ಪಾರ್ಟಕಸ್ ಯಾರೆಂದು ಸೆನೆಟರ್‌ಗಳಿಗೆ ಗೊತ್ತಾಗುವುದಿಲ್ಲ. ಕೊನೆಯಲ್ಲಿ ಎಲ್ಲಾ ಗುಲಾಮರನ್ನು ಬಂಧಿಸಿ ಶಿಲುಬೆಗೇರಿಸುತ್ತಾರೆ. ಆ ಸ್ಥಳಕ್ಕೆ ಸ್ಪಾರ್ಟಕಸ್‌ನ ಹೆಂಡತಿ ತನ್ನ ಮಗುವಿನೊಂದಿಗೆ ಬರುತ್ತಾಳೆ ನಿರಂಕುಶ ಪ್ರಭುತ್ವದೆದುರು ಹೋರಾಟ ನಿರಂತರವಾಗಿ ಮುಂದುವರೆಯುವ ಆಶಯದೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಗುಲಾಮರನ್ನು ದೊರೆಗಳಿಗೆ ಮಾರಲು ಸರಪಳಿಕಟ್ಟಿ ಎಳೆದು ತರುವ ದೃಶ್ಯ, ಸ್ಪಾರ್ಟಕಸ್ ಮತ್ತು ಆಫ್ರಿಕಾದ ಗುಲಾಮನ ನಡುವಿನ ಆಯುಧ ಹೋರಾಟ, ಗುಲಾಮರನ್ನು ಶಿಲುಬೆಗೇರಿಸುವಾಗ ಅಲ್ಲಿಗೆ ಬರುವ ಮಗು ದೃಶ್ಯಗಳು ಅತ್ಯಂತ ನೈಜವಾಗಿ ಮೂಡಿಬಂದಿದ್ದು ನಿರ್ದೇಶನ ಚೊಕ್ಕವಾಗಿತ್ತು.

ನಾಟಕದ ಪ್ರಾರಂಭದಲ್ಲಿ ಪ್ರಗತಿಪರ ಕಲಾರಂಗದ ಕೇರಳ ವಿಭಾಗದ ಕಾರ್ಯದರ್ಶಿಗಳಾದಎಂ. ಕುಟ್ಟಿಕೃಷ್ಣನ್‌ರವರು 'ಸಮಾಜದಲ್ಲಿ ನಾಟಕದ ಪಾತ್ರ' ಕುರಿತು ಮಾತನಾಡಿದರು. ★

ಫಿಜಿಯಲ್ಲಿ ಬಂಡಾಯ – ಸಿ. ಐ. ಎ. ಕೈವಾಡ

ದಕ್ಷಿಣ ಶಾಂತ ಸಾಗರದಲ್ಲಿರುವ ಪುಟ್ಟ ರಾಷ್ಟ್ರ ಫಿಜಿಯಲ್ಲಿ ಮೇ 14 ರಂದು ನಡೆದ ಸೈನಿಕ ಬಂಡಾಯದಲ್ಲಿ ಸಿ.ಐ.ಎ. ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದ ಕೈವಾಡವಿದೆಯೆಂದು ಅಮೇರಿಕದ ಪತ್ರಿಕೆಗಳು ವರದಿ ಮಾಡಿವೆ.

ಸುಮಾರು ಮೂನ್ನೂರಕ್ಕೂ ಮಿಕ್ಕಿದ ಚಿಕ್ಕಪುಟ್ಟ ದ್ವೀಪಗಳನ್ನೊಳಗೊಂಡಿರುವ ಫಿಜಿ ಅರ್ಧಕ್ಕಿಂತಲೂ ಹೆಚ್ಚಿನ ಜನ ಭಾರತೀಯ ಮೂಲದವರು. ಫಿಜಿಯ ಅತ್ಯಂತ ಪ್ರಮುಖ ಆಧಾರ ಕಬ್ಬು. ಫಿಜಿಯ ಮೆಲಿನೇಶಿಯನ್ ಜನರ ಕೈಯಲ್ಲಿರುವ ಕೃಷಿಯೋಗ್ಯ ಭೂಮಿಯನ್ನು ಗೇಣಿಗೆಪಡೆದುಕೊಂಡುಕಬ್ಬಿನ ಬೆಳೆ ಮಾಡುವ ರೈತರು ಭಾರತೀಯ ಮೂಲದವರೇ. ವ್ಯಾಪಾರ, ವಾಣಿಜ್ಯ ಮತ್ತು ಟ್ರೇಡ್‌ಯೂನಿಯನ್ ಸಂಘಟನೆಗಳಲ್ಲೂ ಪ್ರಮುಖಪಾತ್ರ ಭಾರತೀಯ ಮೂಲಕ ಪ್ರಜೆಗಳದ್ದು. ಹಲವಾರು ದಶಕಗಳಿಂದ ಫಿಜಿಯ ಮೂಲ ವಾಸಿಗಳು ಮತ್ತು ಭಾರತೀಯ ಮೂಲದ ಜನ ಸೌಹಾರ್ದದಿಂದ ಬಾಳುತ್ತಿದ್ದರು.

ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಫಿಜಿಯ ಪಾಶ್ಚಾತ್ಯ ಪರವಾಗಿದ್ದ ಸರಕಾರ ಸೋತು ಭಾರತೀಯ ಹಾಗೂ ಫಿಜಿ ಮೂಲವಾಸಿಗಳನ್ನೊಳಗೊಂಡ ಲೇಬರ್ ಪಕ್ಷಗಳ ಒಕ್ಕೂಟ ಅಧಿಕಾರಕ್ಕೆ ಬಂತು. ಹೊಸ ಸರಕಾರ ಅಧಿಕಾರಕ್ಕೆ ಬಂದೊಡನೇ ದಕ್ಷಿಣ ಶಾಂತ ಸಾಗರ ವಲಯವು ಅಣು ಶಸ್ತ್ರಗಳಿಂದ ವಿಮುಕ್ತವಾಗಿರಬೇಕೆಂಬ ಆಶಯವನ್ನು ವ್ಯಕ್ತ ಪಡಿಸಿತು. ಸೋವಿಯತ್ ಒಕ್ಕೂಟದ ಜೊತೆಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಇರಾದೆಯೂ ಈ ಸರಕಾರಕ್ಕೆ ಇದ್ದಿತೆನ್ನಲಾಗಿದೆ.

ಆದರೆ ಚುನಾವಣೆಗಳು ನಡೆದ ಒಂದು ವಾರದ ಮೇಲೆ ಐವರು ಅಮೇರಿಕನ್ನರು ಫಿಜಿಯ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೈನಿಕ ಅಧಿಕಾರಿ ಸಿಟವೆನಿ ರೆಬುಕನ ಜೊತೆಗೆ ಮಾತುಕತೆ ನಡೆಸುತಿದ್ದುದನ್ನು ಕಂಡವರಿದ್ದಾರೆ. ಕರ್ನಲ್ ಸಿಟವೆನಿ ರೆಬುಕ ಮೇ 14 ರಂದು ಸೈನಿಕ ಬಂಡಾಯ ನಡೆಸಿ

> **ಫಿಜಿಯಲ್ಲಿ ಇಂದು ಏನು ನಡೆದಿದೆ ? ಒಂದು ವಿವರಣೆ.**

ಪಾರ್ಲಿಮೆಂಟಿಗೆ ಮುತ್ತಿಗೆ ಹಾಕಿದಾಗ ಅವರೊಂದಿಗೆ ಈ ಅಮೇರಿಕನ್ ಪ್ರಜೆಗಳಲ್ಲಿ ಒಬ್ಬ ಇದ್ದನೆನ್ನಲಾಗಿದೆ. ಬಂಡಾಯ ನಡೆಸಿದ ಸರ್ವಾಧಿಕಾರಿ ರೆಬುಕ ಪ್ರಧಾನ ಮಂತ್ರಿ ಟಿಮೋಸಿ ಬಾವದ್ರಾ ಮತ್ತು ಅವರ ಸಂಪುಟದ ಎಲ್ಲ ಸಚಿವರನ್ನೂ ಗೃಹ ಬಂಧನದಲ್ಲಿರಿಸಿದ್ದಾನೆ. ರೆಬುಕನ ಸರ್ವಾಧಿಕಾರಿ ಸರಕಾರವನ್ನು ಅಮೇರಿಕಾದಲ್ಲಿ ಪ್ರತಿನಿಧಿಸಲು ವಿಶ್ವ ಕಮ್ಯುನಿಸ್ಟ್ ವಿರೋಧಿ ಲೀಗಿನೊಂದಿಗೆ ಸಂಬಂಧ ಹೊಂದಿರುವ ಅಮೇರಿಕನರು ಮುಂದೆ ಬಂದಿದ್ದಾರೆ.

ಏಪ್ರಿಲ್ 29 ರಂದು ವಿಶ್ವಸಂಸ್ಥೆಯಲ್ಲಿ ಅಮೇರಿಕದ ರಾಯಭಾರಿಯಾಗಿರುವ ಜನರಲ್ ವಾಲ್ಟರ್ಸ್ ಫಿಜಿಯ ವಿದೇಶಾಂಗ ಸಚಿವರಾಗಿದ್ದ ಕೃಷ್ಣದತ್ ಅವರನ್ನು ಕಂಡು ಫಿಜಿ ಅಣುಅಸ್ತ್ರಗಳಿಗೆ ವಿರೋಧವಾಗಿರುವ ತನ್ನ ಧೋರಣೆಯನ್ನು ಬದಲಾಯಿಸಬೇಕೆಂದು ಒತ್ತಾಯ ಹೇರಿದ್ದರು. ಈ ಎಲ್ಲ ಪ್ರಯತ್ನ ವಿಫಲವಾದ ಮೇಲೆ ಚುನಾಯಿತ ಸರಕಾರವನ್ನು ಪತನಗೊಳಿಸುವ ಪಿತೂರಿ ನಡೆದಿರುವುದು ಸ್ಪಷ್ಟ.

„ಫಿಜಿ ಮೂಲದ ಜನರು ಮತ್ತು ಭಾರತೀಯ ಮೂಲದ ಜನರ ನಡುವೆ ವಿರಸವಿದ್ದಿತೆನ್ನುವುದು ಸತ್ಯವಲ್ಲ. ಫಿಜಿಯ ವಿದ್ಯಮಾನಗಳಲ್ಲಿ ಅಮೇರಿಕದ ಪಾತ್ರದ ಕುರಿತು ಎದ್ದಿರುವ ಹಲವಾರು ಕಳವಳಕಾರಿ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತಿಲ್ಲ" ವೆಂದು ಅಮೇರಿಕದ ಪತ್ರಿಕೆ 'ನೇಶನ್', ವರದಿ ಮಾಡಿದೆ. ಇದಕ್ಕನುಗುಣವಾಗಿ ಸೈನಿಕ ಸರ್ವಾಧಿಕಾರಿ ರೆಬುಕ ಅಪ್ಪಟಜನಾಂಗವಾದಿ ಧೋರಣೆಯನ್ನು ಪ್ರತಿಪಾದಿಸುತ್ತಿದ್ದಾನೆ. ಫಿಜಿ ಅಣುಶಸ್ತ್ರಗಳಿಗೆ ಪರವಾಗಿರಬೇಕೆಂದಿದ್ದಾನೆ. ಭಾರತೀಯ ಮೂಲದ ಜನರ ರಾಜಕೀಯ ಹಕ್ಕುಗಳನ್ನು ಮೊಟಕು ಗೊಳಿಸುವ ಯತ್ನ ನಡೆಸಿದ್ದಾನೆ. ಈ ಮಿಲಿಟರಿ ಬಂಡಾಯದ ವಿರುದ್ಧ ಮತ್ತು ಪ್ರಜಾಪ್ರಭುತ್ವದ ಮರು ಸ್ಥಾಪನೆಗಾಗಿ ಫಿಜಿಯ ಮೂಲ ವಾಸಿಗಳು ಭಾರತೀಯ ಮೂಲದ ಪ್ರಜೆಗಳು ಒಂದಾಗಿ ಹೋರಾಟ ನಡೆಸುತ್ತಿದ್ದಾರೆ.

ಇರಾಡಿ ಆಯೋಗದ ನಿರರ್ಥಕ ಕಸರತ್ತು

ರಾಜೀವ್-ಲೊಂಗೋವಾಲ್ ಒಪ್ಪಂದದ ಪ್ರಕಾರ ಪಂಜಾಬ್-ಹರ್‍ಯಾಣಗಳ ನಡುವೆ ನದಿ ನೀರಿನ ವಿವಾದ ಪರಿಹರಿಸಲು ನೇಮಿಸಿದ ಇರಾಡಿ ಟ್ರಿಬ್ಯೂನಲ್‌ನ ವರದಿ ಕೂಡಾ ಪಂಜಾಬ್ ಒಪ್ಪಂದದನ್ವಯ ನೇಮಿಸಿದ ಇತರ ಆಯೋಗಗಳಂತೆ ಒಂದು ನಿರರ್ಥಕ ಪ್ರಯಾಸವೆಂಬುದು ಈ ಆಯೋಗದ ತರ್ಕಗಳನ್ನು, ಅದಕ್ಕೆ ನೀಡಲಾದ ಆಧಾರಗಳನ್ನು ಪರಿಶೀಲಿಸಿದಾಗ ಸ್ಪಷ್ಟವಾಗುತ್ತದೆ ಎಂದು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾ|| ಹರ್‌ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಈ ಮೂಲಕ ವಿವಾದವನ್ನು ಪರಿಹರಿಸುವ ಬದಲು ಅದನ್ನು ಮತ್ತಷ್ಟು ಜಟಿಲಗೊಳಿಸಲಾಗಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಪಂಜಾಬ್ ಒಪ್ಪಂದದ ಕಲಮು 9(1) ಹಾಗೂ 9(2)ರ ಪ್ರಕಾರ

> **ಪಂಜಾಬಿನ ನೀರು ಹಂಚಿಕೆ ಕೊನೆಗೂ ಬಗೆಹರಿಯಲ್ಲಿಲ್ಲ.**

ಜುಲೈ 1, 198[illegible]ರಂದು ಪಂಜಾಬ್, ಹರ್‍ಯಾಣ ಹಾಗೂ ರಾಜಸ್ಥಾನ ಬಳಸುತ್ತಿದ್ದ ನೀರಿನ ಪ್ರಮಾಣ ಬದಲಿಸದೆ, ಆದರೆ ಪ್ರಮಾಣವನ್ನು ಪರಿಶೀಲಿಸಿ ಉಳಿದ ನೀರನ್ನು ಹೇಗೆ ಎರಡು ರಾಜ್ಯಗಳಿಗೆ ಒದಗಿಸಬೇಕು ಎಂಬುದು ಇರಾಡಿ ಆಯೋಗದ ಕೆಲಸವಾಗಿತ್ತು. ಆದರೆ ಆಯೋಗ ತನ್ನ ಮಿತಿಯನ್ನು ಮೀರಿ ಪಂಜಾಬ್ ಮತ್ತು ಹರ್‍ಯಾಣದ ರಚನೆಯ ಮೊದಲಿನ ನೀರಿನ ಬಳಕೆಯ ವಿಧಾನವನ್ನು ಕೂಡಾ ಅನಾವಶ್ಯಕವಾಗಿ ಪರಿಶೀಲಿಸಿತು. ವಾಸ್ತವವಾಗಿ ಇದು ಎರಡೂ ರಾಜ್ಯಗಳು ಈಗಾಗಲೇ ಒಪ್ಪಿಕೊಂಡಿರುವ ಸಂಗತಿ. ಇದರಿಂದಾಗಿ ಪಂಜಾಬ್ ದೀರ್ಘಕಾಲದಿಂದ ಬಳಸುತ್ತಿದ್ದ 1.9 ಎಂ.ಎ.ಎಫ್. ನೀರಿನಿಂದ ವಂಚಿತಗೊಳ್ಳುವಂತಾಗಿದೆ. ಮತ್ತು ಪಂಜಾಬಿನ 15ಲಕ್ಷ ಎಕ್ರೆ ಜಮೀನು ನೀರಿಲ್ಲದೆ ಬರಡಾಗುವಂತಾಗುತ್ತದೆ. ಇಷ್ಟೇಅಲ್ಲ, ಇರಾಡಿ ಆಯೋಗದ ಈ ಅನಾವಶ್ಯಕಕೆಲಸದಿಂದಾಗಿ ಈಗಾಗಲೇ ಜಟಿಲಗೊಂಡಿರುವ ರಾಜಕೀಯ ಪರಿಸ್ಥಿತಿ ಇನ್ನಷ್ಟು ಗಂಭೀರಗೊಳ್ಳಲು ಅಸ್ಪದ ನೀಡಿದಂತಾಗಿದೆ.

ಪಂಜಾಬಿನ ಪಾಲು 4.22 ಎ.ಎಫ್.ನಿಂದ 5 ಎಂ.ಎ.ಎಫ್‌ಗೆ ಹೆಚ್ಚುತ್ತದೆ. ಹರ್‍ಯಾಣದ ಪಾಲು 3. ರಿಂದ 3.82ಕ್ಕೇರುತ್ತದೆ ಎಂ[illegible] ಇರಾಡಿ ಆಯೋಗ ವಾದಿಸಿದೆ. ಆ[illegible] ಇದು ವಾಸ್ತವತೆಯನ್ನು, ನಿಜವ[illegible] ಪಡೆಯಬಹುದಾದ ನೀರಿನ ಪ್ರಮಾ[ಣ]ವನ್ನು ನಿರ್ಲಕ್ಷಿಸಿ ನಡೆಸಿದ ಅಂಕೆ-ಸಂ[ಖ್ಯೆ]ಗಳ ಡೊಂಬರಾಟವಷ್ಟೇ. 1981ರ[illegible] ನೇಮಿಸಲ್ಪಟ್ಟ ಆಯೋಗವೊಂ[ದು] ಇಲ್ಲದ ನೀರನ್ನು ಎರಡು ರಾಜ್ಯಗಳಿ[ಗೆ] ಹಂಚಿ ನೀರಿನ ಬಳಕೆಯ ಪ್ರಮಾ[ಣ]ವನ್ನು ಹೆಚ್ಚಿಸಿತ್ತು! ಆದರೆ ಇರಾ[ಡಿ] ಆಯೋಗ ಈಗ ಅದನ್ನು ಮೀರಿಸಿದೆ.

ಹೆಚ್ಚಿಗೆ ಲಭ್ಯವಿರುವ ನೀರಿ[ನ] ಪ್ರಮಾಣವನ್ನು ನಿರ್ಧರಿಸುವ[ಲ್ಲಿ] ಆಯೋಗ ವಾಸ್ತವ ಸ್ಥಿತಿಯ ಅಧ್ಯಯನ ಮಾಡದೆ ತನ್ನ ಎದುರ[ು] ಯಾರೋ ಮಂಡಿಸಿದ ಅಂಕೆ–ಸಂಖ್ಯೆಗಳ ಆಧಾರದಮೇಲಷ್ಟೇ ನಿರ್ಣಯಕ್ಕೆ ಬಂದುಬಿಟ್ಟಿದೆ. ಅದು ಹೆಚ್ಚಿಗೆ ಲಭ್ಯವಿದೆಯೆಂದು ಹೇಳುವ ನೀರನ್ನು ಪಡೆಯುವುದು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಅವಾಸ್ತವಿಕತೆಯಾಗುತ್ತದೆ ಎಂಬುದು ಈಗಾಗಲೇ ಸಿದ್ಧವಾಗಿದೆ. ಅಲ್ಲದೆ ಈ ಹೆಚ್ಚಿನ ಮೂಲಗಳನ್ನು ಕಂಡು ಹಿಡಿಯುವುದು ಕೂಡಾ ಅದರ ವ್ಯಾಪ್ತಿಗೆ ಸೇರದ ವಿಷಯ.

ಒಟ್ಟಿನಲ್ಲಿ, ವಾಸ್ತವಿಕ ದೃಷ್ಟಿಯಿಂದ ನೋಡಿದರೆ ಪಂಜಾಬಿನ ಪಾಲು 3.1 ಎಂ.ಎ.ಎಫ್.ಗೆ ಇಳಿಯುತ್ತದೆ. ಇದು ರಾಜ್ಯದ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುವುದಲ್ಲದೆ ತೀವ್ರಗಾಮಿಗಳಿಗೆ ಜನರನ್ನು ಗೊಂದಲದಲ್ಲಿ ಮುಳುಗಿಸಲು ಮತ್ತೊಂದು ಒಳ್ಳೇ ಅವಕಾಶ ನೀಡಿದೆ. ರಾಷ್ಟ್ರಪತಿ ಆಳ್ವಿಕೆಯ ಲಾಭ ಪಡೆದು ಕೇಂದ್ರ ಸರ್ಕಾರ ಈ ವರದಿಯನ್ನು ಜ್ಯಾರಿಗೊಳಿಸಲು ಪ್ರಯತ್ನಿಸಿದರೆ ಅದರ ಪರಿಣಾಮ ವಿನಾಶಕಾರಿಯಾಗಬಹುದು.

ಈಗಲೂ ಪಕ್ಷಪಾತದ ದೃಷ್ಟಿಕೋನ ಬಿಟ್ಟು, ತಾರ್ಕಿಕ ಪರಿಹಾರಕ್ಕೆ ಪ್ರಾಮಾಣಿಕವಾಗಿ ಸರ್ವಪ್ರಯತ್ನ ನಡೆಸಿದರೆ ನದಿನೀರಿನ ಸಮಸ್ಯೆಗೆ ಪರಿಹಾರ ಹುಡುಕಲು ಸಾಧ್ಯ ಎಂದು ಕಾ|| ಸುರ್ಜಿತ್ ತಿಳಿಸಿದ್ದಾರೆ.

ದೊಡ್ಡ ಬಂಡವಾಳಿಗರ ಸಂಗ ಬಿಡಲೊಲ್ಲದ ಪ್ರಧಾನಿ

ಏಪ್ರಿಲ್ 18 ರಂದು ಕಾಂಗ್ರೆಸ್ (ಐ) ನ ಕಾರ್ಯಕಾರೀ ಸಮಿತಿ "ರಾಜಕೀಯ ಮತ್ತು ಆರ್ಥಿಕ ಅಸ್ಥಿರತೆ" ಉಂಟುಮಾಡುವವರನ್ನು ಉಚ್ಚ ಕಂಠದಿಂದ ಖಂಡಿಸಿತು. ರಾಜೀವ್ ಗಾಂಧಿಯ ಆರ್ಥಿಕ ನೀತಿಯ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದೆ. ಅದು ಸಾರ್ವಜನಿಕ ವಲಯವನ್ನು ಗಟ್ಟಿಗೊಳಿಸುವ ಸ್ವಾವಲಂಬನೆಯ ನೀತಿ ಎಂದು ಹಾಡಿ ಹೊಗಳಿತು. ಮೇ 16 ರಂದು ನವದೆಹಲಿಯ ಬೋಟ್ ಕ್ಲಬ್‌ನ ಸಾರ್ವಜನಿಕ ಸಭೆಯಲ್ಲಿ ಇದನ್ನೇ ಮತ್ತಷ್ಟು ಪುಷ್ಟಿಗೊಳಿಸುತ್ತಾ ರಾಜೀವ್‌ಗಾಂಧಿಯವರು ದೇಶವನ್ನು ಅಸ್ಥಿರಗೊಳಿಸುತ್ತಿರುವ "ಮೀರ್ ಜಾಫರ್"ಗಳು, "ಜಿಯ ಚಂದ್" ಗಳ ವಿರುದ್ಧ ಗುಡುಗಿ ವಿದೇಶೀ ಒತ್ತಡಗಳಿಗೆ ಬಾಗದೆ "ನೆಹರೂ–ಇಂದಿರಾ ಮಾರ್ಗ" ದಲ್ಲಿ ಸಾಗುವುದಾಗಿ ಪಣ ತೊಟ್ಟರು. ಇದನ್ನು ಕಂಡ ಕೆಲವು ರಾಜಕೀಯ ವೀಕ್ಷಕರು ಕನಿಷ್ಟ ತೋರಿಕೆಗಾರರೂ, ದೊಡ್ಡ ತೆರಿಗೆ ವಂಚಕರನ್ನು ಹಿಡಿದುಹಾಕುವುದರಲ್ಲಿ ವಿ.ಪಿ.ಸಿಂಗರಿಗಿಂತ ತಾನೇನೂ ಹಿಂದಿಲ್ಲ ಎಂದು ತೋರಿಸಲಿಕ್ಕಾದರೂ ದೊಡ್ಡ ಬಂಡವಾಳಶಾಹಿಗಳ ವಿರುದ್ಧ ಕೆಲವು ಗಡಸು ಮಾತುಗಳನ್ನಾಡಬಹುದು, ಕ್ರಮಗಳನ್ನು ಕೈಗೊಳ್ಳಬಹುದು ಎಂದು ನಿರೀಕ್ಷಿಸಿದ್ದರು.

ಪ್ರಧಾನ ಮಂತ್ರಿಗಳು ಮೇ 19 ರಂದು ದೇಶದ ದೊಡ್ಡ ಬಂಡವಾಳಗಾರ ಮತ್ತು ದೊಡ್ಡ ತೆರಿಗೆ ವಂಚಕರಿಂದ ಫೆರಾ ಕಾನೂನು ಉಲ್ಲಂಘಿಸುವ ದೊಡ್ಡ ಕುಳಗಳಿಂದ ಕೂಡಿದ ಸಂಘಟನೆಯಾದ FICCI (ಭಾರತೀಯ ವಾಣಿಜ್ಯೋದ್ಯಮಿಗಳ ಮತ್ತು ಕೈಗಾರಿಕೋದ್ಯಮಿಗಳ ಸಂಘಗಳ ಒಕ್ಕೂಟ) ವಜ್ರಮಹೋತ್ಸವ ಅಧಿವೇಶನದಲ್ಲಿ ಮಾಡಿದ ಭಾಷಣ ಈ ಎಲ್ಲಾ ನಿರೀಕ್ಷೆಗಳನ್ನು ಹುಸಿಗೊಳಿಸಿದೆ. ಅಲ್ಲಿ ಅವರು ಏನು ಅಣಿಮುತ್ತುಗಳನ್ನು ಉದುರಿಸಿದರು ಗೊತ್ತೇ ? ಮೂರು ತಿಂಗಳ ಹಿಂದೆ ಈಗಿನ "ಅಸ್ಥಿರತೆಯ ಬೆದರಿಕೆ" ಬರುವ ಮೊದಲು ಅಂತರಾಷ್ಟ್ರೀಯ ಬಂಡವಳಿಗರಿಗೆ ಹೇಳಿದುದನ್ನೇ ಪುನರುಚ್ಚರಿಸಿ "ತೆರಿಗೆಗಳು, ಹತೋಟಿಗಳು ಮತ್ತು ಇತರ ಕ್ರಮಗಳನ್ನು ಆಮೂಲಾಗ್ರವಾಗಿ ಪುನರ್ವಿಮರ್ಶಿಸಿ ಸಡಿಲಗೊಳಿಸುವ ಕೆಲಸ" ನಿರಾತಂಕವಾಗಿ ಮುಂದುವರಿಯುವುದು ಎಂದು ದೊಡ್ಡ ಬಂಡವಾಳಿಗರಿಗೆ ಭರವಸೆ ನೀಡಿದರು; ಆಮದು ನೀತಿಯನ್ನು ವೇಗವಾಗಿ ಸಡಿಲಗೊಳಿಸುತ್ತಿರುವುದರಿಂದ ಭಯಭೀತರಾಗಬೇಕಿಲ್ಲ ಎಂದು ಕೈಗಾರಿಕೋದ್ಯಮಿಗಳಿಗೆ ಆಶ್ವಾಸನೆ ನೀಡಿದರು; ಬೆಲೆ ನಿರ್ಧಾರದಲ್ಲಿ ಸಾರ್ವಜನಿಕ ವಲಯಕ್ಕೆ ಈಗ ಇರುವ ವಿಶೇಷ ಆದ್ಯತೆ ಕ್ರಮೇಣ ಇಲ್ಲವಾಗುವುದೆಂದು ಮಾತು ಕೊಟ್ಟರು. ಆದರೆ ಇತ್ತೀಚೆಗೆ ಬಯಲಾಗುತ್ತಿರುವ ಬಂಡವಾಳಶಾಹಿಗಳ ಭ್ರಷ್ಟ ನಡವಳಿಕೆಗಳ ವಿರುದ್ಧ ಚಕಾರವಿಲ್ಲ; ತೆರಿಗೆ ವಂಚಕ, ವಿದೇಶೀ ವಿನಿಮಯ ಕಾನೂನು (ಫೆರಾ)ಉಲ್ಲಂಘಿಸುವ ದೊಡ್ಡ ಕುಳಗಳ ವಿರುದ್ಧ ಎಚ್ಚರಿಕೆಯ ಮಾತಿಲ್ಲ. FICCIನ ಕುಳಗಳ ವಿರುದ್ಧ ಅವರ ಏಕ ಮಾತ್ರ ದೂರೆಂದರೆ ಅವರು ಸಾಕಷ್ಟು ರಫ್ತು ಮಾಡುತ್ತಿಲ್ಲ ಎಂದು. ಇದು ಐ.ಎಂ.ಎಫ್.ವಿಶ್ವಬ್ಯಾಂಕ್‌ನ ನಿರ್ದೇಶನಗಳಿಗೆ ಅನುಗುಣವಾಗಿಯೇ ಇದೆ.

ಕಾಂಗ್ರೆಸ್[ಐ] ಕಾರ್ಯಗಾರೀ ಸಮಿತಿಯ ನಿರ್ಣಯದ ಗೋಸುಂಬಿತನ, ಅದರ 'ಅಸ್ಥಿರತೆ'ಯ ಪ್ರಚಾರದ ಟೊಳ್ಳುತನ ಇಲ್ಲಿ ಬಯಲಾಗುತ್ತದೆ. ಇನ್ನೊಂದು ಗಮನಾರ್ಹ ಸಂಗತಿಯೆಂದರೆ 1978ರ ನಂತರ ಒಬ್ಬ ಪ್ರಧಾನ ಮಂತ್ರಿ FICCIಯ ಅಧಿವೇಶನದಲ್ಲಿ ಮಾತನಾಡಿರುವುದು ಇದೇ ಮೊದಲು.

ಬೊಫೋರ್, ಸಬ್‌ಮೆರಿನ್ ಅವ್ಯವಹಾರಗಳೇನೇ ಇರಲಿ ದೊಡ್ಡ ಬಂಡವಾಳಶಾಹಿಗಳ ಸಮೃದ್ಧಿಗೆ, ಕೊಬ್ಬು ಹೆಚ್ಚಿಸಿಕೊಳ್ಳಲಿಕ್ಕೆ, ಅನ್ಯಾಯವಾಗಿ ದೋಚಿಕೊಂಡ ಸಂಪತ್ತನ್ನು ವಿದೇಶಗಳಲ್ಲಿ ಭದ್ರವಾಗಿಇಟ್ಟುಕೊಳ್ಳಲಿಕ್ಕೆ ಕಾಂಗ್ರೆಸ್[ಐ] ಸರ್ಕಾರದ ಉದಾರ ಆಶ್ರಯದಲ್ಲಿ ಮುಂದೆಯೂ ಪೂರ್ಣ ಅವಕಾಶವಿದೆ ಎಂಬುದನ್ನು ಸೂಚಿಸಿದ ಭಾಷಣವಿದು.

ಅಲಿಪ್ತ ವಿದೇಶಾಂಗ ನೀತಿ ರಕ್ಷಿಸಿ ಸಿಐಟಿಯು ಕರೆ

ಸಿ.ಐ.ಟಿ.ಯು. ಸಮ್ಮೇಳನ ನಮ್ಮ ದೇಶದ ಅಲಿಪ್ತ ವಿದೇಶಾಂಗ ನೀತಿಯನ್ನು ಶಕ್ತಿ ಪೂರ್ಣವಾಗಿ ಬೆಂಬಲಿಸಬೇಕೆಂದು ಕಾರ್ಮಿಕ ವರ್ಗಕ್ಕೆ ಮತ್ತು ಕಾರ್ಮಿಕ ಆಂದೋಲನಕ್ಕೆ ಕರೆ ನೀಡಿದೆ. ಈ ಬಗ್ಗೆ ಆರನೇ ಸಮ್ಮೇಳನ ಅಂಗೀಕರಿಸಿದ ಒಂದು ನಿರ್ಣಯದಲ್ಲಿ ಭಾರತ ಸರ್ಕಾರ ಅಲಿಪ್ತ ನೀತಿಗೆ ಬದ್ಧವಾಗಿದ್ದರೂ ದೇಶದ ಒಳಗಿನ ಹಾಗೂ ಹೊರಗಿನ ಪ್ರತಿಗಾಮಿ ಶಕ್ತಿಗಳು ಅದನ್ನು ದುರ್ಬಲಗೊಳಿಸಿ ಭಾರತವನ್ನು ಅಮೇರಿಕನ್ ಸಾಮ್ರಾಜ್ಯಶಾಹಿಯ ಬಲೆಯೊಳಗೆ ಸೆಳೆಯುತ್ತಿದ್ದು ಈ ಹಲ್ಲೆಗಳನ್ನು ಹಿಮ್ಮೆಟ್ಟಿಸಲು ಸರ್ಕಾರಿ ಧೋರಣೆಯಲ್ಲಿ ಚಂಚಲತೆ ಕಂಡು ಬಂದಾಗಲೆಲ್ಲಾ ಅದನ್ನು ಸರಿಪಡಿಸಲು ಕಾರ್ಮಿಕ ವರ್ಗ ಸರ್ವ ಪ್ರಯತ್ನ ನಡೆಸಬೇಕೆಂದು ಕರೆ ನೀಡಲಾಗಿದೆ.

ಅಲಿಪ್ತ ನೀತಿ ದೇಶದ ಸ್ವಾತಂತ್ರ್ಯ ಹಾಗೂ ಭದ್ರತಾ ಹಿತಾಸಕ್ತಿಗಳನ್ನು ನಾಲ್ಕು ದಶಕಗಳ ಕಾಲ ಉತ್ತಮ ರೀತಿಯಲ್ಲಿ ಕಾಪಾಡಿದೆ. ಅದು ಶಾಂತಿಯ ಜಾಗತಿಕ ಹೋರಾಟಕ್ಕೆ

[6ನೇ ಪುಟನೋಡಿ]

REG No. BGW-148 MAG (2) PRB DECR 319/78-79

ಸಿ. ಪಿ. ಐ. [ಎಂ] ಮತ್ತು ಸಿ. ಪಿ. ಐ. ಸಮಾವೇಶದ ಕರೆ

[1ನೇ ಪುಟದಿಂದ]

ಸಮಾವೇಶದ ನಿರ್ಣಯ

ರಾಜ್ಯದಲ್ಲಿ ಜನತಾ ಸರ್ಕಾರವು ಎರಡನೆಯ ಬಾರಿಗೆ ಪುನಃ ಅಧಿಕಾರಕ್ಕೆ ಬಂದ ನಂತರ ಬಸ್ ಪ್ರಯಾಣದ ದರ, ವಿದ್ಯುತ್ ದರ, ಹಾಲಿನ ದರ, ಮತ್ತು ಪಡಿತರ ಅಕ್ಕಿಯ ಬೆಲೆಯನ್ನು ಏರಿಸಿದಾಗ ಸಿಪಿಐ (ಎಂ) ಮತ್ತು ಸಿಪಿಐ ಪಕ್ಷಗಳು ಹಾಗೂ ಇತರೆ ಸಾಮಾಜಿಕ ಸಂಘಟನೆಗಳು ಒಂದಾಗಿ 1985ರ ನವೆಂಬರ್ ತಿಂಗಳಲ್ಲಿ ಕರ್ನಾಟಕ ಬಂದ್ ಆಚರಿಸಿ ಪ್ರತಿಭಟಿಸಿದರೂ ಜನತೆಯ ಅತೃಪ್ತಿಯನ್ನು ಜನತಾ ಸರ್ಕಾರ ಲೆಕ್ಕಿಸಲಿಲ್ಲ. ಇದೀಗ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳ ನಂತರ ಪುನಃ ವಿದ್ಯುತ್ ಮತ್ತು ಹಾಲಿನ ದರಗಳನ್ನು ವಿಪರೀತವಾಗಿ ಏರಿಸಲಾಗಿದೆ. ಇದರೊಂದಿಗೆ ಹೋಟೆಲ್ ದರಗಳೂ ದುಬಾರಿಯಾಗಿದೆ. ಸರ್ಕಾರದ ಈ ಕ್ರಮವನ್ನು ಎರಡೂ ಕಮ್ಯೂನಿಸ್ಟ್ ಪಕ್ಷಗಳೂ ಸೇರಿದಂತೆ ರಾಜ್ಯದ ಇತರೆ ಕೆಲವು ರಾಜಕೀಯ ಪಕ್ಷಗಳೂ ಸಂಘ ಸಂಸ್ಥೆಗಳು ಪ್ರತಿಭಟಿಸಿದಾಗ್ಯೂ ಜನತೆಯ ಅಭಿಪ್ರಾಯವನ್ನು ನಿರ್ಲಕ್ಷಿಸಲಾಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪ್ರತಿ ವರ್ಷ ನಷ್ಟದ ನೆಪವೊಡ್ಡಿ ತನ್ನ ಅಧಕ್ಷತೆ, ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯದ ಹೊರೆಯನ್ನು ಬಳಕೆದಾರರ ಮೇಲೆ ಹೇರುತ್ತಾ ಬಂದಿದೆ.

ಬೆಂಗಳೂರು ನಗರದಲ್ಲಿ ಜೀವನ ನಿರ್ವಾಹಣಾ ವೆಚ್ಚವು ಇಡೀ ದೇಶದಲ್ಲಿಯೇ ಅತ್ಯಂತ ದುಬಾರಿಯಾಗಿದ್ದು ಈ ದರಗಳ ಏರಿಕೆಯಿಂದಾಗಿ ನಾಗರೀಕರ ಬದುಕು ಮತ್ತಷ್ಟು ದುಸ್ತರವಾಗಿದೆ. ಆದರಿಂದ ವಿದ್ಯುತ್ ಮತ್ತು ಹಾಲಿನದರಗಳ ಏರಿಕೆಯ ಕ್ರಮವನ್ನು ಪುನರ್ ಪರಿಶೀಲಿಸಿ ದರಗಳನ್ನು ಇಳಿಸಬೇಕೆಂದು ಹಾಗೂ ಹೋಟೆಲ್-ಊಟ ತಿಂಡಿ ವಸತಿ ದರಗಳನ್ನು ನ್ಯಾಯಯುತವಾಗಿ ನಿಗಧಿಪಡಿಸಬೇಕೆಂದು ಈ ಸಮಾವೇಶವು ಸರ್ಕಾರವನ್ನು ಒತ್ತಾಯಿಸುತ್ತದೆ.

ಈ ನಿರ್ಣಯವನ್ನು ಸಿ.ಪಿ.ಐ. (ಎಂ) ಜಿಲ್ಲಾ ಸಕ್ರಾಟಾರಿಯಟ್ ಸದಸ್ಯರಾದ ಕಾ.ಎಸ್.ಆರ್.ಆರಾಧ್ಯರವರು ಮಂಡಿಸಿದರು. ಸಿ.ಪಿ.ಐ.ನ ರೈತಸಂಘದ ಕಾ.ಜಿ.ಎಂ.ವೆಂಕಟೇಶ್ ಅನುಮೋದಿಸಿದರು. ಸಮಾವೇಶದ ಮೊದಲಿಗೆ ಎಸ್.ಎಫ್.ಐ.ಸಾಂಸ್ಕೃತಿಕತಂಡದವರು ಕ್ರಾಂತಿಗೀತೆ ಹಾಡಿದರು ರೈತಸಂಘದ ಜಿಲ್ಲಾ ಮುಖಂಡ ಕಾ. ಲಕ್ಕಣ್ಣ ವಂದನಾರ್ಪಣೆಮಾಡಿ, ಬೆಲೆ ಏರಿಕೆ ವಿರೋಧಿ ಘೋಷಣೆಯೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

ಪ. ಬಂಗಾಳ, ಕೇರಳದ ಜನಪರ ಬಜೆಟ್‌ಗಳು

[1ನೇ ಪುಟದಿಂದ]

ಹಾಗೂ ಮುನಿಸಿಪಾಲಿಟಿಗಳಿಗೆ ವಹಿಸಲಾಗಿದೆ. ಯೋಜನಾ ಬಜೆಟ್‌ನ 862 ಕೋಟಿ ರೂ.ಗಳಲ್ಲಿ 60%ಕ್ಕೂ ಹೆಚ್ಚನ್ನು ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಒದಗಿಸಲಾಗುವುದು.

* ಮೊತ್ತಮೊದಲ ಬಾರಿಗೆ ನಗರಾಭಿವೃದ್ಧಿಯನ್ನು ಉತ್ಪಾದನೆಯೊಂದಿಗೆ ಜೋಡಿಸಲಾಗುವುದು. ಕುಡಿಯುವ ನೀರಿಲ್ಲದ "ಸಮಸ್ಯಾತ್ಮಕ" ಹಳ್ಳಿಗಳ ಸಂಖ್ಯೆಯನ್ನು ಸೊನ್ನೆಗೊಳಿಸಲಾಗುವುದು.

* ಸಧ್ಯದ ಅನುಷ್ಠಾನದಲ್ಲಿರುವ ಹಾಗೂ ಮುಂಬರುವ ಯೋಜನೆಗಳಿಂದ 4.5ಲಕ್ಷ ಉದ್ಯೋಗಾವಕಾಶಗಳು ಉಂಟಾಗುತ್ತವೆ. ಪುನರ್ವ್ಯವಸ್ಥಿತ ಹಾಗೂ ವಿಸ್ತೃತ ಸ್ವಯಂ ಉದ್ಯೋಗ ಯೋಜನೆಯಿಂದಾಗಿ ಇನ್ನೂ 50 ಸಾವಿರ ಜನರಿಗೆ ಉದ್ಯೋಗಾವಕಾಶ ಉಂಟಾಗಲಿದೆ. ಈ ಯೋಜನೆಯಲ್ಲಿ ಸಾಲಪಡೆಯುವ ಕ್ರಮವನ್ನು ಸರಳಗೊಳಿಸಿ ಸ್ಥಳೀಯ ಸಂಸ್ಥೆಗಳು ಇದರಲ್ಲಿ ನಿಕಟ ಸಂಬಂಧ ಹೊಂದುವಂತೆ ಮಾಡಲಾಗುವುದು.

* ಸೈಕಲುಗಳು ಹಾಗೂ ಅದರ ಪರಿಕರಗಳ ಮೇಲಿನ ತೆರಿಗೆಯನ್ನು 6./. ರಿಂದ 4./. ಕ್ಕಿಳಿಸಲಾಗಿದೆ. ಸಿಹಿ ತಿಂಡಿಗಳನ್ನು ತೆರಿಗೆ ಮುಕ್ತಗೊಳಿಸಲಾಗಿದೆ. ವಾರ್ಷಿಕ ವ್ಯಾಪಾರ ಮೊತ್ತ 2 ಲಕ್ಷ ರೂ.ಗಳಿಗಿಂತ ಕಡಿಮೆಯಿರುವ ಸಣ್ಣವ್ಯಾಪಾರಸ್ಥರಿಗೆ ಟರ್ನ್‌ಓವರ್ ತೆರಿಗೆಯಿಂದ ವಿನಾಯ್ತಿ.

ಎಡರಂಗದ ಬಜೆಟ್ ಕೇಂದ್ರಸರ್ಕಾರದ ಧೋರಣೆಗಳಿಗೆ ಪರ್ಯಾಯವಾದ ಎಡರಂಗದ ಧೋರಣೆಗಳನ್ನು ಪ್ರತಿಭಟಿಸಿದೆ ಎಂದು ಪತ್ರಿಕಾ ಸಮ್ಮೇಳನವೊಂದರಲ್ಲಿ ವಿವರಿಸಿರುವ ಅಶೀಮ್‌ದಾಸ್ ಗುಪ್ತಾ ಕೃಷಿ ಭೂಮಿಯ ತರ್ಕ ಬದ್ಧ ಬಳಕೆಯ ಮೇಲೆ, ಸಣ್ಣ ನೀರಾವರಿ ಯೋಜನೆಗಳ ಮೇಲೆ ಹಾಗೂ ಸಮತೂಕದ ಆರ್ಥಿಕತೆಗಾಗಿ ಪ್ರಮುಖ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದರ ಮೇಲೆ ಹೆಚ್ಚು ಒತ್ತು ನೀಡಲಾಗುವುದು ಎಂದಿದ್ದಾರೆ.

ವರ್ಷದ ಕೊನೆಯ ವೇಳೆಗೆ ಕೊರತೆಯಾಗಲೀ, ಮಿಗುತೆಯಾಗಲೀ ಇರದಂತೆ ಮಾಡಲು ಒಂದು ಅಪೂರ್ವ ಪ್ರಯತ್ನ ನಡೆಸಲಾಗುವುದು.

ಕೇರಳ

ಕಾಂಗ್ರೆ ನೇತೃತ್ವದ ಸಂಯುಕ್ತರಂಗ ಸರ್ಕಾರದಲ್ಲಿ ಅತ್ಯಂತ ಆನಂದದಿಂದ, ಅಟ್ಟಹಾಸದಿಂದ ವೈಭವದ ಜೀವನ ನಡೆಸುತ್ತಿದ್ದವರಿಗೆ, ಬಡಜನರ ಮೇಲೆ ಹೆಚ್ಚು ಕರ ಭಾರ ಹೇರಿ ಶ್ರೀಮಂತರಿಗೆ ವಿನಾಯಿತಿ ನೀಡುತ್ತಿದ್ದ, ಪ್ಲಾಂಟೇಷನ್ ಮಾಲೀಕರುಗಳ, ದೊಡ್ಡ ವ್ಯಾಪಾರಿಗಳು ಇತ್ಯಾದಿ ಶ್ರೀಮಂತರು ವಿಧಿಸಿದ ತೆರಿಗೆಯನ್ನೂ ನೀಡದೆ ಅಮಲಿನಲ್ಲಿ ಕಾಲ ಕಳೆಯುತ್ತಿದ್ದ ದಿನಗಳು ಇನ್ನೂ ಮಾಯವಾಗಲಿವೆ ಎಂಬುದರ ಪ್ರಥಮ ಸೂಚನೆ ಕೇರಳದ ಬಜೆಟ್‌ನಲ್ಲಿ ದೊರೆತಿದೆ.

ಸುಮಾರು 158 ಕೋಟಿಗಳಷ್ಟು ಹೆಚ್ಚು ತೆರಿಗೆಗಳನ್ನು ಸಂಗ್ರಹಿಸಲು ಉದ್ದೇಶಿಸಿರುವ ಈ ಬಜೆಟ್‌ನಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಸಂಗ್ರಹವಾಗುವುದು 80ಕೋಟಿ ರೂ. ತೆರಿಗೆಗಳ್ಳತನವನ್ನು ತಪ್ಪಿಸುವುದರಿಂದ ಬಿಗಿಯಾದ ತೆರಿಗೆ ವಸೂಲಿ ಕ್ರಮಗಳನ್ನು ಶ್ರೀಮಂತರ ಮೇಲೆ ಜರುಗಿಸುವುದರಿಂದ.

ಬಜೆಟ್‌ನಲ್ಲಿ ಸೂಚಿಸಲಾದ ಸುಮಾರು 70ಕೋಟಿ ರೂ.ನಷ್ಟು ಹೆಚ್ಚು ತೆರಿಗೆಗಳಲ್ಲಿಯೂ 35ಕೋಟಿ ರೂ.ಗಳಷ್ಟು ತೆರಿಗೆಗಳನ್ನು-ಸಾಮಾನ್ಯಜನತೆಯನ್ನು ಬಡ, ಮಧ್ಯಮ ವರ್ಗದ ರೈತರನ್ನು ಬಾಧಿಸುವ ತೆರಿಗೆಗಳನ್ನು ಹಿಂತೆಗೆದುಕೊಳ್ಳಲಾಗಿದೆ.

ಸಾಮಾನ್ಯರ ಮೇಲಿನ ತೆರಿಗೆಗಳನ್ನು ಇಳಿಸಿ ಶ್ರೀಮಂತರಿಂದ ತೆರಿಗೆ ವಸೂಲಿ ಮಾಡುವ ಕ್ರಮಗಳನ್ನು ಬಿಗಿಗೊಳಿಸಿದ್ದರಿಂದ ಹಾಗೂ ಏರಿಸಿದ್ದರಿಂದ ಈ ವರ್ಗ ಅಸಂತೋಷವಾಗದೇ ಇದ್ದೀತೆ? ಅದನ್ನು ಅವರು ವ್ಯಕ್ತಪಡಿಸಿಯೇ ಬಿಟ್ಟರು. ಬಜೆಟ್ ಮಂಡಿತವಾದ ಮಾರನೇ ದಿನದಲ್ಲಿ ಕೊಚ್ಚಿನ್‌ಮತ್ತು ಆಲೆಪ್ಪಿಗಳ ತೆಂಗು ಹಾಗೂ ಕೊಬ್ಬರಿ ಮಾರಾಟಗಾರರಿಂದಹಠಾತ್‌ಮುಷ್ಕರ. ಆದರೆ ಕೇರಳದ ಅರ್ಥ ಮಂತ್ರಿ ಕಾ|| ವಿಶ್ವನಾಥ ಮೆನನ್‌ರವರು, "ರಾಜಕೀಯ ದುರುದ್ದೇಶದಿಂದ ಕೂಡಿದ ಈ ಮಾರಾಟಗಾರರ ಮುಷ್ಕರದಂತಹ ಕ್ರಮವನ್ನು ಸರ್ಕಾರ ಸಹಿಸುವುದಿಲ್ಲ. ಈ ಜನರಿಗೆ ಮಾರ್ಚ್ 24 ಹಾಗೂ ಜೂ. 3ರ ಚುನಾವಣೆಯ ಫಲಿತಾಂಶ ಅರ್ಥವಾದಂತೆ ಕಾಣಿಸುತ್ತಿಲ್ಲ."ಎಂದು ಎಚ್ಚರಿಸಿದ್ದಾರೆ.

ಈಗ ಸುಮಾರು 73.15 ಕೋಟಿ ರೂ. ಕೊರತೆಯುಳ್ಳ ಬಜೆಟ್‌ನಲ್ಲಿ ವಿದ್ಯುತ್ ದರಏರಿಕೆಯ ಪ್ರಸ್ತಾಪವಿಲ್ಲ. ಮೊದಲು ಕೇವಲ ಕೈಗಾರಿಕೋದ್ಯಮಗಳಿಗೆ ವಿದ್ಯುತ್‌ದರ ಹೆಚ್ಚಿಸಬೇಕೆಂದು ಮಾಡಿದ ಪ್ರಸ್ತಾಪವನ್ನು ಹಿಂತೆಗೆದುಕೊಳ್ಳಲಾಗಿದೆ.

ಮೀನುಗಾರರಿಗೆ ಸಾಮೂಹಿಕ ವಿಮೆ, ವೃದ್ಧರಿಗೆ ಪೆನ್‌ಷನ್ ಹಾಗೂ ನಿರುದ್ಯೋಗ ಭತ್ತೆಯನ್ನು 45 ರೂನಿಂದ 60 ರೂ.ಗೆ ಹೆಚ್ಚಳ, ರೈತರಿಗೆ ರಸಗೊಬ್ಬರಗಳಿಗಾಗಿ ವಿಶೇಷ ಸಬ್ಸಿಡಿ, ನಿರುದ್ಯೋಗ ಯುವಜನಕ್ಕೆ ಹೆಚ್ಚು ಪ್ರಮಾಣದಲ್ಲಿ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮಗಳು ಒಂದು ವರ್ಷದೊಳಗಾಗಿ ಎಲ್ಲ ಪಂಚಾಯತಿ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಇತ್ಯಾದಿ ಪ್ರಗತಿಪರ ಕ್ರಮಗಳನ್ನು ಸೂಚಿಸಲಾಗಿದೆ. ಇದು ಪ್ಲಾಂಟೇಷನ್ ಮಾಲೀಕರುಗಳಲ್ಲಿ ಇತರ ಶ್ರೀಮಂತ ವಿಭಾಗಗಳಲ್ಲಿ ಕೋಪ ಕೆರಳಿಸಿರುವಂತೆಯೇ ಜನಸಾಮಾನ್ಯರಲ್ಲಿ ಆಶಾಭಾವನೆಯನ್ನು ಉಂಟುಮಾಡಿದೆ

ಪಾಲಿಟ್‌ಬ್ಯೂರೋ ಆತಂಕ

[1ನೇ ಪುಟದಿಂದ]

ಹಾರ ಕಂಡುಹಿಡಿಯಬೇಕೆಂದು ಒತ್ತಾಯಿಸುತ್ತಾ ಬಂದಿದ್ದು ಅದರಿಂದಾಗಿಯೇ ಡಿಸೆಂಬರ್ 19ರ ಪ್ರಸ್ತಾಪಗಳನ್ನು ಬೆಂಬಲಿಸಿತ್ತು. ಆದರೆ ಶ್ರೀಲಂಕಾ ಸರ್ಕಾರ ಭಾರತದಮಧ್ಯಸ್ಥಿಕೆಪ್ರಯತ್ನಗಳನ್ನು ನಿರ್ಲಕ್ಷಿಸಿ "ಕೊನೆಯವರೆಗೆ ಹೋರಾಟ"ಘೋಷಣೆಯೊಂದಿಗೆ ಮಿಲಿಟರಿ ಪರಿಹಾರಕ್ಕೆ ಪ್ರಯತ್ನಿಸುತ್ತಿರುವುದನ್ನು ಖಂಡಿಸಿರುವ ಪಾಲಿಟ್‌ಬ್ಯೂರೋ ಡಿಸೆಂಬರ್ ಪ್ರಸ್ತಾಪಗಳ ಆಧಾರದ ಮೇಲೆ ಮಾತು ಕತೆಗಳಲ್ಲಿ ಭಾಗವಹಿಸುವ ತಮ್ಮ ಇಚ್ಛೆಯನ್ನು ನಿಸ್ಸಂಧಿಗ್ಧವಾಗಿ ಘೋಷಿಸಬೇಕೆಂದು ಹೋರಾಟ ನಿರತ ತಮಿಳರಿಗೆ ಕರೆ ನೀಡಿದೆ.

ಜಯವರ್ಧನೆ ಸರ್ಕಾರದ ನಿಲುವು ಅಮೇರಿಕನ್ ಸಾಮ್ರಾಜ್ಯಶಾಹಿ ಹಾಗೂ ಇಸ್ರೇಲಿ ನಂತಹ ಅದರ ಮಿತ್ರರಿಗೆ ಅಣ್ಣ ತಮ್ಮಂದಿರ ನಡುವಿನ ಕಲಹವನ್ನು ದುರಪಯೋಗಿಸಿಕೊಂಡು ಶ್ರೀಲಂಕಾದಲ್ಲಿ ಬೇರು ಬಿಡಲು ಅವಕಾಶ ಮಾಡಿಕೊಡುತ್ತದೆ. ಇದರಿಂದ ಉಪಖಂಡದಲ್ಲಿ ಅಸ್ಥಿರತೆ ಉಂಟು ಮಾಡಿ ನಮ್ಮ ದೇಶಗಳ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಕ್ಕೇ ಸಾಮ್ರಾಜ್ಯ ಶಾಹಿಗಳಿಂದ ಸಂಚಕಾರ ಬರುತ್ತದೆಯೆಂದು ಪಾಲಿಟ್‌ಬ್ಯೂರೋ ಎಚ್ಚರಿಸಿದೆ.

ಪರಿಹಾರ ಪೂರೈಕೆಯ ಪ್ರಶ್ನೆಯ ಮೇಲೆ ಯಾವುದೇ ದುಸ್ಸಾಹಸವಾದೀ ಕ್ರಮ ಎರಡೂ ದೇಶಗಳಲ್ಲಿನ ಜನತೆಯ ಹಿತಾಶಕ್ತಿಗಳಿಗೆ ಮಾರಕ. ಅದು ಅಲಿಪ್ತ ಆಂದೋಲನದ ಪ್ರಭಾವನನ್ನು ಕೂಡಾ ಕುಂಟಿಸುವ ಕ್ರಮ ಎಂದು ಸಿ.ಪಿ.ಐ. [ಎಂ]ನ ಪಾಲಿಟ್‌ಬ್ಯೂರೋ ಎಚ್ಚರಿಸಿದೆ.

ಈವಾರ....

★ 1987-88 ನೇ ಸಾಲಿನ ಪಾಕಿಸ್ತಾನದ ಬಜೆಟ್‌ನಲ್ಲಿ ಮೊತ್ತ ಮೊದಲ ಬಾರಿ 'ರಕ್ಷಣಾ ತೆರಿಗೆ' ವಿಧಿಸಲಾಗಿದೆ. ಈ "ಯುದ್ಧ ಬಜೆಟ್"ನ ಸಲಹೆಯನ್ನು ಅಮೇರಿಕಾ ನೀಡಿದ್ದು ಅಫಘಾನಿಸ್ತಾನದ ವಿರುದ್ಧ ಅಮೇರಿಕದ ಯುದ್ಧಕ್ಕೆ ಪಾಕಿಸ್ತಾನಿಗಳು ಬೆಲೆ ತೆರುವಂತೆ ಮಾಡಲಾಗುತ್ತಿದೆ" ಎಂದು ಪ್ರಜಾಪ್ರಭುತ್ವ ಮರು ಸ್ಥಾಪನೆ ಆಂದೋಲನದ ಒಬ್ಬ ಪ್ರಮುಖ ಮುಖಂಡ ಮಿರಜ್ ಮುಹಮ್ಮದ್ ಖಾನ್ ಹೇಳಿದ್ದಾರೆ.

ಡೆಕ್ಕನ್ ಹೆರಾಲ್ಡ್ ಸುದ್ಧಿ ಜೂನ್ 5,

★ ತನ್ನ ಬಂದರುಗಳಿಗೆ ಬರುವ ಸುಮಾರು ಎಲ್ಲಾ ಅಮೇರಿಕನ್ ಹಡಗುಗಳ ಮೇಲೆ ನಿಷೇಧ ಹಾಕಬಹುದಾದ ಪರಮಾಣು ಶಸ್ತ್ರ ವಿರೋಧೀ ಶಾಸನ ವೊಂದನ್ನು ಅಂಗೀಕರಿಸಿದ ನ್ಯೂಝಿಲೆಂಡ್‌ಗೆ ಅಮೇರಿಕನ್ ಸರ್ಕಾರ ಪರೋಕ್ಷ ಬೆದರಿಕೆ ಹಾಕಿದೆ

ಎ.ಎಫ್.ಪಿ. ಸುದ್ದಿ, ಜೂನ್.5

★ ಬರ್ನಾಲ ಸರ್ಕಾರ ಉಗ್ರಗಾಮಿಗಳನ್ನು ನಿಯಂತ್ರಿಸುವಲ್ಲಿ ಅಸಮರ್ಥವಾಗಿದೆ. ಎಂದು ಕಾರಣ ನೀಡಿ ರಾಷ್ಟ್ರಪತಿಗಳ ಆಳ್ವಿಕೆ ಜಾರಿಗೆ ಬಂದು ಇನ್ನೇನು ಒಂದು ತಿಂಗಳಾಗಲಿದೆ. ರಾಜ್ಯಪಾಲ ಸಿದ್ದಾರ್ಥ ಶಂಕರಾಯ್ ಹಾಗೂ ದಕ್ಷರೆಂದು ಹೆಸರಾದ ಪೋಲೀಸ್ ಅಧಿಕಾರಿ ರಿಬೆರೋ ಉಗ್ರಗಾಮಿಗಳನ್ನು ನಿಯಂತ್ರಿಸುವಲ್ಲಿ ಪೂರ್ಣವಿಫಲರಾಗಿದ್ದಾರೆ. ಈಗ ಅಗತ್ಯ ಬೇಕಾಗಿರುವುದು ಶಾಂತಿ ಅದನ್ನು ಬಂದೂಕದಿಂದ ಸಾಧಿಸಲು ಸಾಧ್ಯವಿಲ್ಲ. ಅದಕ್ಕೆ ರಾಜಕೀಯ ಮುತ್ಸದ್ದಿತನ ಬೇಕು ರಾಜಕೀಯ ಕಳಕಳಿಯೂ ಇರಬೇಕು.

—ಪ್ರಜಾವಾಣಿ, ಜೂನ್ 9

★ ಸರ್ಕಾರದ ಎಲ್ಲಾ ಸಚಿವ ಖಾತೆಗಳು ಒಪ್ಪಿರುವ ಸರ್ಕಾರದ ಕೈಗಾರಿಕಾ ಹಾಗೂ ಲೈಸೆನ್ಸ್‌ನೀಡಿಕೆ ಕುರಿತಾದ ಧೋರಣೆಗಳಿಗೆ ಸೂಚಿಸಲಾಗಿರುವ ಸುಧಾರಣೆಗಳು ವಿಶ್ವಬ್ಯಾಂಕಿನ ಶಿಫಾರಸುಗಳಂತೆಯೇ ಇದೆ.

ಡೆಕ್ಕನ್ ಹೆರಾಲ್ಡ್ ಸುದ್ಧಿ, ಜೂನ್ 8.

★ ವಿದೇಶ ವ್ಯಾಪಾರದಲ್ಲಿನ ಒಟ್ಟಾರೆ ಬಾಕಿ 1984-85ರ 2582.4 ಕೋಟಿ ರೂಗಳಿಂದ 1985-86ರಲ್ಲಿ 5927.3 ಕೋಟಿ ರೂಗಳಿಗೆ ದ್ವಿಗುಣಗೊಂಡಿದೆ. ಇತ್ತೀಚಿನ ರಿಝರ್ವ್ ಬ್ಯಾಂಕ್ ಅಂಕಿ ಅಂಶಗಳ ಪ್ರಕಾರ 1985-86ರಲ್ಲಿ ವಿದೇಶ ವ್ಯಾಪಾರ ಕೊರತೆ ರೂ. 8747 ಕೋಟಿ ಎಂದು ಕೇಂದ್ರ ಸರಕಾರ ಬಜೆಟ್ ಪೂರ್ವ ಆರ್ಥಿಕ ಸಮೀಕ್ಷೆ ಹೇಳಿದ್ದು, ವಾಸ್ತವವಾಗಿ ಅದು 9586 ಕೋಟಿ ರೂಗಳೆಂದು ತಿಳಿದು ಬಂದಿದೆ.

ಯು.ಎನ್.ಐ. ಸುದ್ಧಿ, ಜೂನ್ 10

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. RamachandraRao
Managing Editor : N. K. Upadhyaya